I. Meue

ELEMENTS

OF

CANARESE GRAMMAR.

BY REV. C. CAMPBELL, B. A.

ಕನ್ನಡ ವ್ಯಾಕರಣ ಸಾರವು.

ಕೇಂಬಲ್ ಅಯ್ಯಾನವರು ಬರೆದದ್ದು.

Fifth Edition,
3000 *Copies.*

BANGALORE:
[PRIN]TED AND PUBLISHED FOR THE TRACT AND
SCHOOL BOOK SOCIETY,
BY W. W. GAUNT, AT THE WESLEYAN MISSION PRESS,
1870.

Price 1½ Annas.

ELEMENTS

OF

CANARESE GRAMMAR.

BY REV. C. CAMPBELL, B. A.

ಕನ್ನಡ ವ್ಯಾಕರಣ ಸಾರವು.

ಕೇಂಬಲ್ ಅಯ್ಯನವರು ಬರೆದದ್ದು.

Fifth Edition,

3000 *Copies.*

BANGALORE:

PRINTED AND PUBLISHED FOR THE TRACT AND SCHOOL BOOK SOCIETY,

BY W. W. GAUNT, AT THE WESLEYAN MISSION PRSSE,

1870.

CONTENTS.

ORTHOGRAPHY.

ETYMOLOGY.

ಸೂಚನೆ.

ಅಕ್ಷರ ಲಕ್ಷಣ.

ಶಬ್ದ ಲಕ್ಷಣ.

CANARESE GRAMMAR.

ಕನ್ನಡ ವ್ಯಾಕರಣ ಸಾರ.

1. ಕನ್ನಡ ವ್ಯಾಕರಣವು ಕನ್ನಡ ಭಾಷೆಯನ್ನು ಯುಕ್ತವಾಗಿಯೂ ಸ್ಪಷ್ಟವಾಗಿಯೂ ಮಾತನಾಡುವದಕ್ಕೂ ಬರೆಯುವದಕ್ಕೂ ತಿಳಿಸುತ್ತದೆ.

OF LETTERS.

ವರ್ಣಗಳನ್ನು ಕುರಿತು.

2 ಕನ್ನಡ ಭಾಷೆಯ ವರ್ಣಗಳು, ಇಲ್ಲವೆ ಅಕ್ಷರಗಳು, ಐವತ್ತೊಂದು. ಅವು ಯಾವವಂದರೆ,

ಅ ಆ ಇ ಈ ಉ ಊ

ಋ ೠ ಎ ಏ ಐ

ಒ ಓ ಔ

ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

OF LETTERS.

ಯ ರ ಲ ವ

ಶ ಷ ಸ ಹ ಳ ಕ್ಷ.

3. ಇವು ಸ್ವರಗಳೆಂದೂ ವ್ಯಂಜನಗಳೆಂದೂ ಎರಡು ವಿಧವು.

4. ಸ್ವರವಾದರೆ, ಪ್ರತ್ಯೇಕವಾಗಿ ವ್ಯಂಜನವಿಲ್ಲದೆ ನುಡಿಯು ತಕ್ಕ ವರ್ಣವು; ವ್ಯಂಜನ ನುಡಿಯಲಿಕ್ಕೆ ಯಾವದಾದರೂ ಒಂದು ಸ್ವರ ಶೇರಿರ ಬೇಕು.

5. ಅಕಾರ ಮೊದಲು ಔಕಾರದ ವರಿಗೂ ಸ್ವರಗಳು.

6. ಇವು ಹ್ರಸ್ವವೆಂದೂ ದೀರ್ಘವೆಂದೂ ಎರಡು ವಿಧವು.

7. ಹ್ರಸ್ವ ಸ್ವರಗಳು—ಅ, ಇ, ಉ, ಋ, ಎ, ಒ.

8. ದೀರ್ಘ ಸ್ವರಗಳು, ಆ, ಈ, ಊ, ೠ, ಏ, ಐ, ಓ, ಔ.

9. ಅಂ ಅಃ ಎಂಬವುಗಳಲ್ಲಿ ಸೊನ್ನೆ (೦) ಎಂಬುವದಕ್ಕೆ ಅನುಸ್ವಾರವೆಂದೂ, ಎರಡು ಸೊನ್ನೆ (ಃ) ಎಂಬುವದಕ್ಕೆ ವಿಸರ್ಗವೆಂದೂ ಹೇಳುವದು. ಮತ್ತು ಇವು ಸ್ವರಗಳಿಗೂ ವ್ಯಂಜನಗಳಿಗೂ ಸಮ್ಬಂಧವಾಗಿರುವದರಿಂದ ಯೋಗವಾಹಗಳೆಂದು ಕರೆಯಲ್ಪಡುವವು.

10. ಕಕಾರ ಮೊದಲು ಳಕಾರದ ವರಿಗೂ ವ್ಯಂಜನಗಳು.

11. ಕ್ಷಕಾರವು ಕಕಾರ ಷಕಾರಗಳಿಂದ ಹುಟ್ಟಿದ್ದು.

12. ವ್ಯಂಜನಗಳಲ್ಲಿ ವರ್ಗೀಯಗಳು ಅವರ್ಗೀಯಗಳು ಎಂದು ಎರಡು ತರ ಉಂಟು. ವರ್ಗ ಅಂದರೆ ರಾಶಿ. ಐದು ವರ್ಗಗಳುಂಟು.

OF LETTERS.

13. ಅವರ್ಗೀಯಗಳು—ಯ ರ ಲ ವ ಶ ಷ ಸ ಹ ಳ ಕ್ಷ.

14. ವರ್ಗೀಯಗಳಲ್ಲಿ, ಪರುಷ, ಸರಳ, ಅನುನಾಸಿಕ, ಮೂರು ತರ; ಪರುಷ ಅಂದರೆ ಘಟ್ಟಿ ಎಂದೂ, ಸರಳ ಮೆತ್ತಗೆ ಎಂದೂ, ಅನುನಾಸಿಕ ಮೂಗಿನಲ್ಲಿ ನುಡಿಯುವಂಥಾದ್ದೆಂದೂ, ಅರ್ಥ.

ಪರುಷ		ಸರಳ		ಅನುನಾಸಿಕ
ಕ	ಖ	ಗ	ಘ	ಙ
ಚ	ಛ	ಜ	ಝ	ಞ
ಟ	ಠ	ಡ	ಢ	ಣ
ತ	ಥ	ದ	ಧ	ನ
ಪ	ಫ	ಬ	ಭ	ಮ

15. ಮತ್ತು ಖ ಘ ಮೊದಲಾದ ಒತ್ತಕ್ಷರಗಳಿಗೆ ಮಹಾ ಪ್ರಾಣವೆಂದೂ, ಒತ್ತಿಲ್ಲದ ಅಕ್ಷರಗಳಿಗೆ ಅಲ್ಪಪ್ರಾಣವೆಂದೂ ಹೆಸರು.

16. ವರ್ಣಗಳು ಒಂದಕ್ಕೊಂದು ಸೇರಿದರೆ, ರೂಪ ಭೇದವಾಗುತ್ತವೆ. ಹ್ಯಾಗಂದರೆ, ಕ ಕಾ ಕಿ ಕೀ ಕು ಕೂ ಕೃ ಕೄ ಕೆ ಕೇ ಕೈ ಕೊ ಕೋ ಕೌ, ಕ್ಕ ಕ್ಖ ಕ್ಚ ಕ್ಛ ಕ್ಟ ಕ್ಡ ಕ್ಣ ಕ್ತ ಕ್ಥ ಕ್ನ ಕ್ಪ ಕ್ಫ ಕ್ಮ ಕ್ಯ ಕ್ರ ಕರ್ ಕ್ಲ ಕ್ವ ಕ್ಶ ಕ್ಷ ಕ್ಸ ಕ್ಳ

17. ವ್ಯಂಜನಕ್ಕೆ ಬೇರೆ ಸ್ವರ ಸೇರದಿದ್ದರೆ, ಅದಕ್ಕೆ ತಲೆಕಟ್ಟು ಇದ್ದರೂ, ತಲೆಕಟ್ಟು ಇಲ್ಲದಿದ್ದರೂ, ಅಕಾರ ಸೇರಿ ಇದೆ ಎಂದು ತಿಳಿದುಕೊಳ್ಳಬೇಕು. ಉದಾಹರಣೆ—ಕ, ಲ.

18. ಸ್ವರ ಸೇರದ ವ್ಯಂಜನಕ್ಕೆ ಅರ್ಧಾಕ್ಷರವೆಂದು ಹೆಸರು. ಉದಾ. ಕ್, ಚ್, ಗ್.

OF WORDS.

ಶಬ್ದಗಳನ್ನು ಕುರಿತು.

19. ಅರ್ಥವನ್ನು ಕೊಡುವ ಹಾಗೆ ಅಕ್ಷರಗಳನ್ನು ಕೂಡಿಸಿದರೆ, ಅದು ಶಬ್ದವು. ಉದಾ. ತಲೆ, ಮುಖ, ಶರೀರ, ನಾ, ನೀ, ಅವ, ಓದು, ನಡಿ.

20. ಯಾವ ಭಾಷೆಯಲ್ಲಾದರೂ ಸ್ವಂತ ಶಬ್ದಗಳು ಮಾತ್ರ ಪ್ರಯೋಗವಾಗುವದಿಲ್ಲ; ಎಲ್ಲವುಗಳಲ್ಲಿ ಅನ್ಯ ಭಾಷೆಗಳ ಶಬ್ದಗಳು ಮಿಶ್ರವಾಗಿವೆ.

21. ಹಾಗೆಯೇ ಕನ್ನಡದಲ್ಲಿ ಸಂಸ್ಕೃತ, ಹಿಂದುಸ್ತಾನಿ, ಮೊದಲಾದ ಭಾಷೆಗಳಿಂದ ಸೇರಿದವುಗಳು ಅನೇಕ ಉಂಟು.

22. ಶುದ್ಧ ಕನ್ನಡವಾದರೆ, ದೇಶ್ಯವೆಂದು ಹೇಳಲ್ಪಡುವದು. ಉದಾ. ಕೆಂಪು, ಕೆನ್ನೆ, ಮನೆ, ಕೈ, ಕಾಲು, ಹುಳ, ಮಳೆ.

23. ಕೆಟ್ಟು ಹೋಗದೆ ಇರುವ ಸಂಸ್ಕೃತ ಶಬ್ದವು ತತ್ಸಮವೆಂದು ಹೇಳಲ್ಪಡುವದು. ಉದಾ.

ಸಂಸ್ಕೃತ —	ದೇವ	ನಾರಿ	ಪುಷ್ಪ	ಶೂರ	ಪ್ರೀತಿ
ಕನ್ನಡ —	ದೇವರು	ನಾರಿಯು	ಪುಷ್ಪವು	ಶೂರನು	ಪ್ರೀತಿಯು

24. ಸಂಸ್ಕೃತ ಶಬ್ದವು ವಿಕಾರವಾಗಿ ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟರೆ, ತದ್ಭವವೆಂದು ಹೇಳಲ್ಪಡುವದು. ಉದಾ.

ಸಂಸ್ಕೃತ —	ಅಕ್ಷರ	ಸೂಚಿ	ವೃಷಭ	ದೇವಾಲಯ	ಸ್ತಂಭ
ಕನ್ನಡ —	ಅಕ್ಕರವು	ಸೂಜಿಯು	ಬಸವ	ದೇಗಲ	ಕಂಭ

25. ಹಿಂದುಸ್ತಾನಿ ಮೊದಲಾದ ಭಾಷೆಗಳಿಂದ ಕನ್ನಡದಲ್ಲಿ ಶೇರಿಸಲ್ಪಟ್ಟದ್ದು ಅನ್ಯದೇಶ್ಯವೆಂದು ಹೇಳಲ್ಪಡುವದು. ಉದಾ. ಹುಕುಂ, ಜಪ್ದಿ, ತಯಾರ್, ರಿಪೋರ್ಟು, ಅಪ್ಪೀಲ್, ಕೋರ್ಟು.

26. ಗ್ರಾಮ್ಯದವರು ಇಲ್ಲವೆ ಕಲಿಯದವರು ಮಾತ್ರ ಆಡುವ ಮಾತು ಗ್ರಾಮ್ಯವೆಂದು ಹೇಳಲ್ಪಡುವದು. ಉದಾ. ಹೂವು ಎಂಬುವದಕ್ಕೆ ಹುವ್ವು; ಪುಸ್ತಕ, ಪಸ್ತಕ; ವಿಚಾರಣೆ, ಇಸಾರಣೆ; ಮೇಲೆ, ಮೇಗೆ; ಎಷ್ಟು, ಏಸು; ಬ್ರಮ್ಹ, ಬೊಮ್ಮ.

27. ಶಬ್ದಗಳ ಮುಖ್ಯವಾದ ತರಗಳು ಯಾವವಂದರೆ, ನಾಮಪದ, ಗುಣವಾಚಕ, ಸರ್ವನಾಮ, ಕ್ರಿಯಾಪದ, ಅವ್ಯಯ.

28. ಶಬ್ದದ ಮೂಲಾಕ್ಷರಗಳು ಮಾತ್ರ ಇದ್ದರೆ, ಅದಕ್ಕೆ ಪ್ರಕೃತಿ ಎಂಬ ಹೆಸರು. ಉದಾ. ಮನುಷ್ಯ, ಕುದುರೆ.

29. ಬೇರೆ ಬೇರೆ ಅರ್ಥಗಳನ್ನು ಕೊಡುವ ಹಾಗೆ, ಪ್ರಕೃತಿಯ ಮೇಲೆ ಶೇರುವ ವರ್ಣಗಳಿಗೆ ಪ್ರತ್ಯಯ ಎಂಬ ಹೆಸರು. ಉದಾ. ಕುದುರೆಯು. ಇಲ್ಲಿ ಉ ಪ್ರತ್ಯಯ ಬಂತು.

30. ಪ್ರತ್ಯಯವುಳ್ಳ ಶಬ್ದಕ್ಕೆ ಪದ ಎಂಬ ಹೆಸರು.

31. ಅರ್ಥ ತೀರುವ ಹಾಗೆ ಪದಗಳನ್ನು ಕೂಡಿಸಿದರೆ, ಅದು ವಾಕ್ಯವು. ಉದಾ. ಆ ಮನೆ ದೊಡ್ಡದು. ನಾನು ಬರುತ್ತೇನೆ. ಅವನು ಒಳ್ಳೆಯವನು.

32. ಶಬ್ದಗಳ ಪ್ರತ್ಯಯಗಳನ್ನು ಶೇರಿಸುವದರಲ್ಲಿಯೂ ಅವುಗಳನ್ನು ಪ್ರಯೋಗಿಸುವದರಲ್ಲಿಯೂ ಸಂಧಿ ಅನೇಕ ಸ್ಥಳಗಳಲ್ಲಿ ಬರುತ್ತದೆ. ಆದದರಿಂದ ಶಬ್ದ ಭೇದಗಳನ್ನು ಕಲಿಯುವದಕ್ಕಿಂತ ಮುಂಚೆ ಸಂಧಿಯ ನ್ಯಾಯಗಳನ್ನು ಕಲಿಯ ಬೇಕು.

OF THE JUNCTION OF LETTERS,

ಸಂಧಿಯನ್ನು ಕುರಿತು.

33. ಸಂಧಿಯೆಂದರೆ, ಕಿವಿಗಿಂಪಾಗುವ ಹಾಗೆ ಎರಡು ಅಕ್ಷರಗಳನ್ನು ಕೂಡಿಸಿ ಹೇಳುವ ಉಪಾಯ.

34. ಸಂಧಿ ಮಾಡುವದರಲ್ಲಿ ಲೋಪ, ಆಗಮ, ಆದೇಶಗಳು ಬರುತ್ತವೆ.

35. ಒಂದು ವರ್ಣ ಇಲ್ಲದೆ ಹೋಗುವದು ಲೋಪ. ಉದಾ. ಅವನು ಇಲ್ಲ—ಅವನಿಲ್ಲ. ಇಲ್ಲಿ ಅವನು ಎಂಬುವದರಲ್ಲಿ ಉ ಲೋಪವಾಯಿತು.

36. ಎರಡು ವರ್ಣಗಳ ನಡುವೆ ಬರುವದೇ ಆಗಮ. ಉದಾ. ಕೆಲಸ ಇಲ್ಲ—ಕೆಲಸವಿಲ್ಲ. ಇಲ್ಲಿ ವ್ ಆಗಮ ಬಂತು

37. ಒಂದು ವರ್ಣ ಹೋಗಿ ಅದಕ್ಕೆ ಬದಲಾಗಿ ಬೇರೊಂದು ಬಂದರೆ, ಅದು ಆದೇಶ. ಉದಾ. ಆಡು, ಆಟ. ಇಲ್ಲಿ ಡು ಹೋಯಿತು, ಟ ಬಂತು; ಆದದರಿಂದ ಡು ಎಂಬ ಅಕ್ಷರಕ್ಕೆ ಟ ಆದೇಶವಾಯಿತು.

JUNCTION OF VOWELS.

ಸ್ವರ ಸಂಧಿ.

38. ಅಕಾರದ ಮೇಲೆ ಸ್ವರ ಬಂದರೆ ಅಕಾರಕ್ಕೆ ಲೋಪ ಬರುತ್ತದೆ. ಉದಾ. ದೊಡ್ಡ ಅಪ್ಪನು, ದೊಡ್ಡಪ್ಪನು. ಅಲ್ಲಿಂದ ಅಲ್ಲಿಗೆ, ಅಲ್ಲಿಂದಲ್ಲಿಗೆ.

OF THE JUNCTION OF LETTERS.

39. ಕೆಲವು ಕಡೆಯಲ್ಲಿ ಅಕಾರದ ಮೇಲೆ ಅಕಾರ ಬಂದರೆ ಎರಡು ಲೋಪವಾಗಿ ವ್ಯಂಜನ ಒತ್ತಾಗಿ ಬರುವದು. ಉದಾ. ಮಾಡಿದ ಅದು ಮಾಡಿದ್ದು.

40. ಆ, ಇ, ಈ, ಎ, ಏ, ಐ, ಇವುಗಳ ಮೇಲೆ ಸ್ವರ ಬಂದರೆ, ನಡುವೆ ಯ ಕಾರಾಗಮು ಬರುತ್ತದೆ. ಉದಾ. ಕಾ—ಉತ್ತಾನೆ, ಕಾಯುತ್ತಾನೆ; ಆಸ್ತಿ ಇಂದ, ಆಸ್ತಿಯಿಂದ; ಮನೆ ಅಲ್ಲಿ, ಮನೆಯಲ್ಲಿ; ಸ್ತ್ರೀ ಇಂದ, ಸ್ತ್ರೀಯಿಂದ; ತೇ ಉವದು, ತೇಯುವದು; ಕೈ ಒಳಗೆ, ಕೈಯೊಳಗೆ.

41. ಕೆಲವು ಕಡೆಯಲ್ಲಿ ಇ, ಎ, ಕಾರಗಳ ಮೇಲೆ ಸ್ವರ ಬಂದರೆ, ಅವುಗಳಿಗೆ ಲೋಪವಾಗುತ್ತದೆ. ಉದಾ. ಮನೆಯಲ್ಲಿ ಇದ್ದನು, ಮನೆಯಲ್ಲಿದ್ದನು. ತಂದೆಗೆ ಆಯಿತು, ತಂದೆಗಾಯಿತು.

42. ಕೆಲವು ಕಡೆಯಲ್ಲಿ ಆಗಮವಾದರೂ, ಲೋಪವಾದರೂ, ಆಗಬಹುದು. ಉದಾ. ಬೆಟ್ಟದಲ್ಲಿ ಏ, ಬೆಟ್ಟದಲ್ಲೇ, ಬೆಟ್ಟದಲ್ಲಿಯೇ; ಕುದುರೆಗೆ—ಊ, ಕುದುರೆಗೂ, ಕುದುರೆಗೆಯೂ.

43. ಉಕಾರದ ಮೇಲೆ ಸ್ವರ ಬಂದರೆ, ಅದಕ್ಕೆ ಲೋಪವಾಗುತ್ತದೆ. ಉದಾ. ಮಗನು ಇಲ್ಲ. ಮಗನಿಲ್ಲ.

44. ಕೆಲವು ಕಡೆಯಲ್ಲಿ ವ ಕಾರಾಗಮು ಬರುತ್ತದೆ. ಉದಾ. ಗುರು ಎಂದು, ಗುರುವೆಂದು.

45. ಈ ನ್ಯಾಯಗಳು ದೇಶ್ಯ ಶಬ್ದಗಳಿಗೆ ಆಗುತ್ತವೆ. ತತ್ಸಮ ಶಬ್ದಗಳಾದರೆ, ಸಂಸ್ಕೃತ ನ್ಯಾಯಗಳ ಪ್ರಕಾರ ಸಂಧಿ ಆಗಬೇಕು. ಹ್ಯಾಗಂದರೆ,

OF THE JUNCTION OF LETTERS.

ಅಕಾರದ ಮೇಲೆ ಅಕಾರ ಬಂದರೆ, ಆ ಆಗುತ್ತದೆ. ಉದಾ. ಗುಣ ಅತಿಶಯ, ಗುಣಾತಿಶಯ.

ಅಕಾರದ ಮೇಲೆ ಆಕಾರ ಬಂದರೆ, ಆ ಆಗುತ್ತದೆ. ಉದಾ. ಪರಿಶುದ್ಧ ಆತ್ಮ, ಪರಿಶುದ್ಧಾತ್ಮ.

ಇಕಾರದ ಮೇಲೆ ಈಕಾರ ಬಂದರೆ, ಈ ಆಗುತ್ತದೆ. ಉದಾ. ಕವಿ ಈಶ್ವರ, ಕವೀಶ್ವರ.

ಅಕಾರದ ಮೇಲೆ ಉಕಾರ ಬಂದರೆ, ಓ ಆಗುತ್ತದೆ. ಉದಾ. ಸಮುದ್ರ ಉದಕ, ಸಮುದ್ರೋದಕ, ಇತ್ಯಾದಿ.

JUNCTION OF CONSONANTS.

ವ್ಯಂಜನ ಸಂಧಿ.

46. ವ್ಯಂಜನಗಳು ಅನೇಕ ಸ್ಥಳಗಳಲ್ಲಿ ಒಂದಕ್ಕೊಂದು ಬದಲಾಗುವವು. ಹ್ಯಾಗಂದರೆ,

ಕ—ಗ—ಆಗುತ್ತದೆ. ಉದಾ. ಮರಕಾಲು, ಮರಗಾಲು.

ತ—ದ—ಆಗುತ್ತದೆ. ಉದಾ. ಹುಲಿ ತೊಗಲು, ಹುಲಿದೊಗಲು.

ಪ—ಬ—ಆಗುತ್ತದೆ. ಉದಾ. ತೊಮ್ ಪತ್ತು, ತೊಂಬತ್ತು.

ಪ—ವ—ಆಗುತ್ತದೆ. ಉದಾ. ನಾಲ್ ಪತ್ತು, ನಾಲ್ವತ್ತು. ಇತ್ಯಾದಿ.

OF NOUNS.

ನಾಮಪದಗಳನ್ನು ಕುರಿತು.

47. ನಾಮ ಪದವು ಯಾವದೊಂದರ ಹೆಸರನ್ನು ಹೇಳುವದು. ಉದಾ. ಮನುಷ್ಯ, ಮರ, ಪಕ್ಷಿ, ಪಶು, ಬುದ್ಧಿ, ಸುಖ.

48. ನಾಮಪದಗಳಿಗೆ ಮೂರು ಲಿಂಗಗಳುಂಟು. ಅವು ಯಾವವಂದರೆ, ಪುಲ್ಲಿಂಗವು, ಸ್ತ್ರೀಲಿಂಗವು, ನಪುಂಸಕಲಿಂಗವು. ಪುರುಷರನ್ನು ಹೇಳುವದು ಪುಲ್ಲಿಂಗವು; ಸ್ತ್ರೀಯರನ್ನು ಹೇಳುವದು ಸ್ತ್ರೀಲಿಂಗವು; ಮಿಕ್ಕಾದವುಗಳನ್ನು ಹೇಳುವದು ನಪುಂಸಕಲಿಂಗವು.

ಉದಾಹರಣೆ.

ಪುಲ್ಲಿಂಗ.	ಸ್ತ್ರೀಲಿಂಗ.	ನಪುಂಸಕಲಿಂಗ
ಮನುಷ್ಯನು	ಹೆಂಗತಿಯು	ಕುರಿಯು

49. ನಾಮಪದಗಳಿಗೆ ಏಕವಚನವೆಂದೂ ಬಹುವಚನವೆಂದೂ ಎರಡು ವಚನಗಳುಂಟು. ಏಕವಚನ ಒಂದನ್ನು ಹೇಳುವದು; ಬಹುವಚನ ಅನೇಕವನ್ನು ಹೇಳುವದು.

50. ನಾಮಪದಗಳಿಗೆ ಎಂಟು ವಿಭಕ್ತಿಗಳುಂಟು. ಯಾವವಂದರೆ, ಪ್ರಥಮೆ, ಸಂಬೋಧನೆ, ದ್ವಿತೀಯೆ, ತೃತೀಯೆ, ಚತುರ್ಥೀ, ಪಂಚಮಿ, ಷಷ್ಠಿ, ಸಪ್ತಮಿ.

51. ಆ ವಿಭಕ್ತಿಗಳನ್ನು ತೋರಿಸುವ ಪ್ರತ್ಯಯಗಳು ಯಾವವಂದರೆ, ಪ್ರಥಮೆ, ಉ; ಸಂಬೋಧನೆ, ಏ; ದ್ವಿತೀಯೆ, ಅ, ಅನ್ನು; ತೃತೀಯೆ

ಇಂದ; ಚತುರ್ಥಿ, ಗೆ ಇಗೆ ಅಕ್ಕೆ; ಪಂಚಮಿ, ದೆಸೆಯಿಂದ; ಷಷ್ಟಿ, ಅ; ಸಪ್ತಮಿ, ಅಲ್ಲಿ.

52. ಈ ವಿಭಕ್ತಿಗಳ ಹೆಸರುಗಳಿಗೆ ಅರ್ಥವೇನಂದರೆ, ಪ್ರಥಮೆ ಮೊದಲನೇದು; ದ್ವಿತಿಯೆ ಎರಡನೇದು; ತೃತಿಯೆ ಮೂರನೇದು; ಚತುರ್ಥಿ ನಾಲ್ಕನೇದು; ಪಂಚಮಿ ಐದನೇದು; ಷಷ್ಟಿ ಆರನೇದು; ಸಪ್ತಮಿ ಏಳನೇದು. ಇವು ಸಂಸ್ಕೃತ ವ್ಯಾಕರಣದಲ್ಲಿ ಬರುತ್ತವೆ; ಆದದರಿಂದ ಕನ್ನಡ ವ್ಯಾಕರಣದಲ್ಲಿಯೂ ಸೇರಿಸಿದ್ದಾರೆ.

53. ಸಂಬೋಧನೆ ಅಂದರೆ, ಕರೆಯುವ ವಿಭಕ್ತಿ. ಸಂಬೋಧನೆಗೆ ಬದಲಾಗಿ ಪ್ರಕೃತಿ ಬರುವದುಂಟು. ಬಂದರೆ, ಅದರ ಕಡೆ ಸ್ವರವು ಹ್ರಸ್ವವಾಗಲಿ ದೀರ್ಘವಾಗಲಿ ಇರ ಬಹುದು. ಉದಾ. ಅಪ್ಪ, ಅಪ್ಪಾ; ತಂದೆ, ತಂದೇ.

---

1. DECLENSION.

೧. ರೂಪ.

54. ಅಕಾರಂತ ಸ್ತ್ರೀ ಪುಲ್ಲಿಂಗದ ನಾಮಪದಗಳು ೧ನೇ ರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ, ಪುಲ್ಲಿಂಗವಾದರೆ, ನಕಾರಾಗಮವೂ, ಸ್ತ್ರೀಲಿಂಗವಾದರೆ, ಳಕಾರಾಗಮವೂ ಬರುತ್ತವೆ. ಬಹು ವಚನದಲ್ಲಿ ಎರಡು ಲಿಂಗಗಳ ನಾಮಪದಗಳಿಗೆ ಅರ್ ಆಗಮ ಬರುತ್ತದೆ. ಮತ್ತು ಅಪರೂಪವಾಗಿ ಅರುಗಳ್ ಆಗಮ ಬರುವದುಂಟು.

ಉದಾಹರಣೆ.

ಪುಲ್ಲಿಂಗ. ವೀರ ಶಬ್ದ.

	ಏಕವಚನ.	ಬಹುವಚನ.	
ಪ್ರ.	ವೀರನು	ವೀರರು	ವೀರರುಗಳು
ಸಂ.	ವೀರನೇ	ವೀರರೇ	ವೀರರುಗಳೇ
ದ್ವಿ.	ವೀರನ ವೀರನನ್ನು	ವೀರರ ವೀರರನ್ನು	ವೀರರುಗಳ ವೀರರುಗಳನ್ನು
ತೃ.	ವೀರನಿಂದ	ವೀರರಿಂದ	ವೀರರುಗಳಿಂದ
ಚ.	ವೀರನಿಗೆ, ವೀರಗೆ	ವೀರರಿಗೆ	ವೀರರುಗಳಿಗೆ
ಪ.	ವೀರನದೆಸೆ ಯಿಂದ	ವೀರರದೆಸೆ ಯಿಂದ	ವೀರರುಗಳದೆಸೆಯಿಂದ
ಷ.	ವೀರನ	ವೀರರ	ವೀರರುಗಳ
ಸ.	ವೀರನಲ್ಲಿ	ವೀರರಲ್ಲಿ	ವೀರರುಗಳಲ್ಲಿ

ಸ್ತ್ರೀಲಿಂಗ, ಹುಚ್ಚ ಶಬ್ದ.

	ಏಕವಚನ.	ಬಹುವಚನ.
ಪ್ರ.	ಹುಚ್ಚಳು	ಹುಚ್ಚರು
ಸಂ.	ಹುಚ್ಚಳೇ	ಹುಚ್ಚರೇ

	ಏಕವಚನ	ಬಹುವಚನ
ದ್ವಿ.	ಹುಚ್ಚಳ	ಹುಚ್ಚರ
	ಹುಚ್ಚಳನ್ನು	ಹುಚ್ಚರನ್ನು
ತೃ.	ಹುಚ್ಚಳಿಂದ	ಹುಚ್ಚರಿಂದ
ಚ.	ಹುಚ್ಚಳಿಗೆ	ಹುಚ್ಚರಿಗೆ
ಪ.	ಹುಚ್ಚಳದೆಸೆಯಿಂದ	ಹುಚ್ಚರದೆಸೆಯಿಂದ
ಷ.	ಹುಚ್ಚಳ	ಹುಚ್ಚರ
ಸ.	ಹುಚ್ಚಳಲ್ಲಿ	ಹುಚ್ಚರಲ್ಲಿ

2. DECLENSION.

೨. ರೂಪ.

55. ಅಕಾರಾಂತ ನಪುಂಸಕಲಿಂಗದ ನಾಮಪದಗಳು ೨ನೇ ರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ಪ್ರಥಮೆ, ಸಂಬೋಧನೆ, ದ್ವಿತೀಯೆ ವಿಭಕ್ತಿಗಳಿಗೆ ವಕಾರಾಗಮವೂ ತೃತೀಯೆ, ಷಷ್ಠಿ, ಸಪ್ತಮಿಗಳಿಗೆ ದಕಾರಾಗಮವೂ ಬರುವವು. ಚತುರ್ಥಿಗೆ ಆಗಮವಿಲ್ಲ. ಬಹುವಚನಗಳಲ್ಲಿ ಗಳ್ ಆಗಮವು ಎಲ್ಲಾ ವಿಭಕ್ತಿಗಳಿಗೆ ಬರುವದು.

OF NOUNS.

ಉದಾಹರಣೆ.

ಗಜ ಶಬ್ದವು.

	ಏಕವಚನ.	ಬಹುವಚನ.
ಪ್ರ.	ಗಜವು	ಗಜಗಳು
ಸಂ.	ಗಜವೇ	ಗಜಗಳೇ
ದ್ವಿ.	ಗಜವ, ಗಜವನ್ನು	ಗಜಗಳ, ಗಜಗಳನ್ನು
ತೃ.	ಗಜದಿಂದ	ಗಜಗಳಿಂದ
ಚ.	ಗಜಕ್ಕೆ	ಗಜಗಳಿಗೆ
ಪ.	ಗಜದದೆಸೆಯಿಂದ	ಗಜಗಳದೆಸೆಯಿಂದ
ಷ.	ಗಜದ	ಗಜಗಳ
ಸ.	ಗಜದಲ್ಲಿ	ಗಜಗಳಲ್ಲಿ

---

3. DECLENSION.

೩. ರೂಪ.

56. ಇ, ಈ, ಎ, ಐ, ಕಾರಾಂತ ನಾಮಪದಗಳು ಸ್ತ್ರೀ ಪುಲ್ಲಿಂಗಗಳಲ್ಲಿ 3ನೇ ರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ಚತುರ್ಥಿಯಲ್ಲದೆ, ಮಿಕ್ಕಾದ ವಿಭಕ್ತಿಗಳಿಗೆ ಯಕಾರಾಗಮವು ಬರುತ್ತದೆ. ಬಹುವಚನದಲ್ಲಿ ಅರ್ ಆಗಮಿ, ಗಳ್ ಆಗಮಿ ಬರುವದು. ನಪುಂಸಕವಾದರೆ, ಬಹುವಚನದಲ್ಲಿ ಗಳ್ ಆಗಮ ಮಾತ್ರ ಬರುತ್ತದೆ.

OF NOUNS.

ಉದಾಹರಣೆ.

ಪುಲ್ಲಿಂಗ ಅರಿ ಶಬ್ದ.

	ಏಕವಚನ.	ಬಹುವಚನ.
ಪ್ರ.	ಅರಿಯು	ಅರಿಗಳು
ಸಂ.	ಅರಿಯೇ	ಅರಿಗಳೇ
ದ್ವಿ.	ಅರಿಯ, ಅರಿಯನ್ನು	ಅರಿಗಳ, ಅರಿಗಳನ್ನು
ತೃ.	ಅರಿಯಿಂದ	ಅರಿಗಳಿಂದ
ಚ.	ಅರಿಗೆ	ಅರಿಗಳಿಗೆ
ಪ.	ಅರಿಯದೆಸೆಯಿಂದ	ಅರಿಗಳ ದೆಸೆಯಿಂದ
ಷ.	ಅರಿಯ	ಅರಿಗಳ
ಸ.	ಅರಿಯಲ್ಲಿ	ಅರಿಗಳಲ್ಲಿ

ಸ್ತ್ರೀಲಿಂಗ ಸ್ತ್ರೀ ಶಬ್ದ.

	ಏಕವಚನ.	ಬಹುವಚನ.
ಪ್ರ.	ಸ್ತ್ರೀಯು	ಸ್ತ್ರೀಯರು
ಸಂ.	ಸ್ತ್ರೀಯೇ	ಸ್ತ್ರೀಯರೇ
ದ್ವಿ.	ಸ್ತ್ರೀಯ ಸ್ತ್ರೀಯನ್ನು	ಸ್ತ್ರೀಯರ ಸ್ತ್ರೀಯರನ್ನು

OF NOUNS.

ಏಕವಚನ.		ಬಹುವಚನ.
ತೃ.	ಸ್ತ್ರೀಯಿಂದ	ಸ್ತ್ರೀಯರಿಂದ
ಚ.	ಸ್ತ್ರೀಗೆ	ಸ್ತ್ರೀಯರಿಗೆ
ಪ.	ಸ್ತ್ರೀಯ ದೆಸೆಯಿಂದ	ಸ್ತ್ರೀಯರ ದೆಸೆಯಿಂದ
ಷ.	ಸ್ತ್ರೀಯ	ಸ್ತ್ರೀಯರ
ಸ.	ಸ್ತ್ರೀಯಲ್ಲಿ	ಸ್ತ್ರೀಯರಲ್ಲಿ

ನಪುಂಸಕ ಕುರಿ ಶಬ್ದ.

ಏಕವಚನ.		ಬಹುವಚನ.
ಪ್ರ.	ಕುರಿಯು	ಕುರಿಗಳು
ಸಂ.	ಕುರಿಯೇ	ಕುರಿಗಳೇ
ದ್ವಿ.	ಕುರಿಯ, ಕುರಿಯನ್ನು	ಕುರಿಗಳ, ಕುರಿಗಳನ್ನು
ತೃ.	ಕುರಿಯಿಂದ	ಕುರಿಗಳಿಂದ
ಚ.	ಕುರಿಗೆ	ಕುರಿಗಳಿಗೆ
ಪ.	ಕುರಿಯದೆಸೆಯಿಂದ	ಕುರಿಗಳ ದೆಸೆಯಿಂದ
ಷ.	ಕುರಿಯ	ಕುರಿಗಳ
ಸ.	ಕುರಿಯಲ್ಲಿ	ಕುರಿಗಳಲ್ಲಿ

---

4. DECLENSION.

೪. ರೂಪ.

57. ಉ, ಊ, ಋ, ಓ, ಔ ಕಾರಾಂತ ನಾಮಪದಗಳು ೪ನೇ ರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ವಕಾರಾಗಮ ಬರುವದುಂಟು; ಆಗಮ ಬಾರದೆ ಇರುವದುಂಟು. ಕೆಲವು ವಿಭಕ್ತಿಗಳಿಗೆ ಇನ್ ಆಗಮ ಬರ ಬಹುದು. ಬಹುವಚನದಲ್ಲಿ ಗಳ್ ಆಗಮ ಬರುತ್ತದೆ.

58. ಗಂಡಸು, ಹೆಂಗಸು ಶಬ್ದಗಳಿಗೆ ಬಹುವಚನದಲ್ಲಿ ಅರ್ ಆಗಮ ಬರುವದು.

ಉದಾಹರಣೆ.

ಗುರು ಶಬ್ದ.

	ಏಕವಚನ.	ಬಹುವಚನ.
ಪ್ರ.	ಗುರುವು	ಗುರುಗಳು
ಸಂ.	ಗುರುವೇ	ಗುರುಗಳೇ
ದ್ವಿ.	ಗುರುವ, ಗುರುವನ್ನು	ಗುರುಗಳ, ಗುರುಗಳನ್ನು
ತೃ.	ಗುರುವಿಂದ, ಗುರುವಿನಿಂದ	ಗುರುಗಳಿಂದ
ಚ.	ಗುರುವಿಗೆ	ಗುರುಗಳಿಗೆ
ಪಂ.	ಗುರುವಿನದೆಸೆಯಿಂದ	ಗುರುಗಳ ದೆಸೆಯಿಂದ
ಷ.	ಗುರುವಿನ, ಗುರುವ	ಗುರುಗಳ
ಸ.	ಗುರುವಿನಲ್ಲಿ, ಗುರುವಲ್ಲಿ	ಗುರುಗಳಲ್ಲಿ

ಕೂಸು ಶಬ್ದ.

	ಏಕವಚನ.	ಬಹುವಚನ.
ಪ್ರ.	ಕೂಸು	ಕೂಸುಗಳು
ಸಂ.	ಕೂಸೇ	ಕೂಸುಗಳೇ
ದ್ವಿ.	ಕೂಸ, ಕೂಸನ್ನು	ಕೂಸುಗಳ, ಕೂಸುಗಳನ್ನು
ತೃ.	ಕೂಸಿಂದ, ಕೂಸಿನಿಂದ	ಕೂಸುಗಳಿಂದ
ಚ.	ಕೂಸಿಗೆ	ಕೂಸುಗಳಿಗೆ
ಪಂ.	ಕೂಸಿನದೆಸೆಯಿಂದ	ಕೂಸುಗಳದೆಸೆಯಿಂದ
ಷ.	ಕೂಸ, ಕೂಸಿನ	ಕೂಸುಗಳ
ಸ.	ಕೂಸಲ್ಲಿ, ಕೂಸಿನಲ್ಲಿ	ಕೂಸುಗಳಲ್ಲಿ

NOUNS OF RELATIONSHIP.

ಬಂಧು ವಾಚಕಗಳು.

59. ಅಕಾರಾಂತ ಬಂಧುವಾಚಕ ಶಬ್ದಕ್ಕೆ ಬಹುವಚನದಲ್ಲಿ ಅಂದಿರ್ ಆಗಮ ಬರುತ್ತದೆ.

ಉದಾಹರಣೆ.

	ಏಕವಚನ.	ಬಹುವಚನ.
ಪ್ರ.	ತಮ್ಮನು	ತಮ್ಮಂದಿರು
ಸಂ.	ತಮ್ಮನೇ	ತಮ್ಮಂದಿರೇ, ಇತ್ಯಾದಿ.

60. ಇದಕ್ಕಪವಾದವು ಮಗ ಶಬ್ದಕ್ಕೆ ಬಹುವಚನದಲ್ಲಿ ಕ್ಕಳ್ ಆದೇಶ ಬರುತ್ತದೆ.

ಉದಾಹರಣೆ.

	ಪುಲ್ಲಿಂಗ.	ಸ್ತ್ರೀಲಿಂಗ.	ನಪುಂಸಕಲಿಂಗ.
ಏಕವಚನ.	ಮಗನು.	ಮಗಳು.	ಮಗುವು.
ಬಹುವಚನ.	ಮಕ್ಕಳು.	ಇತ್ಯಾದಿ.	

61. ಅಮ್ಮ, ಅಕ್ಕ, ಅವ್ವ, ಮಾತರ ಶಬ್ದಗಳಿಗೆ ಏಕವಚನದಲ್ಲಿ ಪುಲ್ಲಿಂಗದ ಹಾಗೆ ರೂಪವಾಗುತ್ತದೆ. ಉದಾ. ಪ್ರ. ಅಮ್ಮನು. ಸಂ. ಅಮ್ಮನೇ. ಇತ್ಯಾದಿ.

OF ADJECTIVES.

ಗುಣವಾಚಕಗಳನ್ನು ಕುರಿತು.

62. ಗುಣವನ್ನು ಹೇಳುವದು ಗುಣವಾಚಕವು. ಉದಾ. ಚಿಕ್ಕ ಹುಡುಗನು. ದೊಡ್ಡ ಮನೆ. ಕರೀ ಕುದುರೆ. ಇವುಗಳಲ್ಲಿ ಚಿಕ್ಕ, ದೊಡ್ಡ, ಕರಿ ಎಂಬವುಗಳು ಗುಣವಾಚಕಗಳು.

63. ಗುಣವನ್ನಲ್ಲದೆ ವಸ್ತುವನ್ನು ಸಹಿತವಾಗಿ ಹೇಳುವದಕ್ಕೆ ಗುಣವಾಚಕದ ಮೇಲೆ ಮೂರು ಲಿಂಗಗಳ ಪ್ರತ್ಯಯಗಳನ್ನು ಸೇರಿಸಬಹುದು.

ಉದಾಹರಣೆ.

ಹಿರಿಯನು ಹಿರಿಯಳು ಹಿರಿದು
ಹೊಸಬನು ಹೊಸಬಳು ಹೊಸದು, ಹೊಸತು

64. ಇವುಗಳ ಮೇಲೆ ಬಂದ ದುಪ್ರತ್ಯಯು ಅದು ಶಬ್ದವೆಂಬ ಸರ್ವನಾಮದಿಂದ ಬರುತ್ತದೆ. ಆದಕಾರಣ ಅದರ ವಿಭಕ್ತಿಗಳೇ ಆಗುತ್ತವೆ. ಆ ವಿಭಕ್ತಿಗಳು ಮುಂದೆ ತೋರಿಸಲ್ಪಡುವವು.

ವಸ್ತುವನ್ನು ಸಹ ಹೇಳುವಂಥ ಗುಣವಾಚಕ ನಾಮಪದಕ್ಕೆ ಸಮಾನವಾಗಿದೆ.

65. ಗುಣವಾಚಕಗಳಿಗೆ ಆದ, ಆದಂಥ, ಪ್ರತ್ಯಯಗಳು ಬರುತ್ತವೆ. ಮತ್ತು ನಾಮವಾಚಕಗಳಿಗೆ ಆದ, ಆದಂಥ, ಉಳ್ಳ, ಉಳ್ಳಂಥ ಪ್ರತ್ಯಯಗಳನ್ನು ಸೇರಿಸಿದರೆ ಗುಣವಾಚಕಗಳ ಅರ್ಥ ಕೊಡುತ್ತವೆ. ಉದಾ. ಪರಿಶುದ್ಧವಾದ, ಪರಿಶುದ್ಧವಾದಂಥ, ಪಾಪವಾದ, ಪಾಪವಾದಂಥ, ಪಾಪವುಳ್ಳ, ಪಾಪವುಳ್ಳಂಥ.

66. ಲೆಖ್ಖವನ್ನೂ ಅಳತೆಯನ್ನೂ ಹೇಳುವ ಶಬ್ದಗಳು ಗುಣವಾಚಕಕ್ಕೆ ಸಮ್ಮಂಧವಾಗಿರುತ್ತವೆ. ಅವು ಯಾವವಂದರೆ, ಅನೇಕ ಕೆಲ, ಇಷ್ಟು, ಅಷ್ಟು, ಎಲ್ಲಾ. ಮತ್ತು ಒಂದು, ಎರಡು, ಮೊದಲಾದ ಸಂಖ್ಯಾವಾಚಕಗಳು.

67. ಎಲ್ಲಾ ಶಬ್ದವು ಅಳತೆಯನ್ನು ಹೇಳುವ ಕಡೆಯಲ್ಲಿ ಏಕವಚನ; ಲೆಖ್ಖವನ್ನು ಹೇಳುವ ಕಡೆಯಲ್ಲಿ ನಿತ್ಯ ಬಹುವಚನ.

ಉದಾಹರಣೆ.

ಮನೆಯೆಲ್ಲಾ, ದೇಶವೆಲ್ಲಾ, ಎಲ್ಲಾ ಜನರು, ಎಲ್ಲರು ಇತ್ಯಾದಿ.

NUMERALS.

ಸಂಖ್ಯಾವಾಚಕಗಳು.

68. ಒಂದು, ಎರಡು, ಮೂರು; ಒಬ್ಬ, ಇಬ್ಬ, ಮೂವ, ಮೊದಲಾದ ಲೆಖ್ಖದ ಶಬ್ದಗಳ ರೂಪಗಳು ಯಾವವಂದರೆ:—

69. ಒಬ್ಬ ಶಬ್ದ.

	ಪುಂ. ಏಕ.	ಸ್ತ್ರೀ. ಏಕ.	ಪು. ಸ್ತ್ರೀ. ಬಹು.
ಪ್ರ.	ಒಬ್ಬನು	ಒಬ್ಬಳು	ಒಬ್ಬರು
ದ್ವಿ.	ಒಬ್ಬನ, ಒಬ್ಬನನ್ನು	ಒಬ್ಬಳ, ಒಬ್ಬಳನ್ನು	ಒಬ್ಬರ, ಒಬ್ಬರನ್ನು
ತೃ.	ಒಬ್ಬನಿಂದ	ಒಬ್ಬಳಿಂದ	ಒಬ್ಬರಿಂದ
ಚ.	ಒಬ್ಬನಿಗೆ, ಒಬ್ಬಗೆ	ಒಬ್ಬಳಿಗೆ	ಒಬ್ಬರಿಗೆ
ಪ.	ಒಬ್ಬನದೆಸೆಯಿಂದ	ಒಬ್ಬಳದೆಸೆಯಿಂದ	ಒಬ್ಬರದೆಸೆಯಿಂದ
ಷ.	ಒಬ್ಬನ	ಒಬ್ಬಳ	ಒಬ್ಬರ
ಸ.	ಒಬ್ಬನಲ್ಲಿ	ಒಬ್ಬಳಲ್ಲಿ	ಒಬ್ಬರಲ್ಲಿ

ಇದರ ಬಹುವಚನದ ಹಾಗೆ ಇಬ್ಬ, ಮೂವ ಮೊದಲಾದ ಶಬ್ದಗಳಿಗೆ ರೂಪವಾಗುತ್ತದೆ; ಅವುಗಳಿಗೆ ಏಕವಚನವಿಲ್ಲ.

PRONOUNS.

70. ಒಂದು ಶಬ್ದ.

ಪ್ರ. ಒಂದು	ತೃ. ಒಂದರಿಂದ	ಪ. ಒಂದರದೆಸೆಯಿಂದ
ದ್ವಿ. ಒಂದು, ಒಂದನ್ನು	ಚ. ಒಂದಕ್ಕೆ	ಷ. ಒಂದರ
		ಸ. ಒಂದರಲ್ಲಿ

71. ಹೀಗೆ ಎರಡು, ಮೂರು, ನಾಲ್ಕು ಮೊದಲಾದ ಶಬ್ದಗಳು ಆಗುತ್ತವೆ. ಮತ್ತು ಅಷ್ಟು, ಇಷ್ಟು, ಎಷ್ಟು ಶಬ್ದಗಳು ಹೀಗೆ ಆಗುತ್ತವೆ.

72. ಮಗ್ಗಿಯಲ್ಲಿ ಉಕಾರಾಂತವಾದ ಲೆಖ್ಖದ ಶಬ್ದಗಳ ಕಡೇ ಉಕಾರಕ್ಕೆ ಲಕಾರಾಗಮ ಬರುತ್ತದೆ. ಉದಾ. ಎರಡೊಂದ್ಲ ಎರಡು, ಎರಡೆರಡ್ಲ ನಾಲ್ಕು.

PRONOUNS.

ಸರ್ವನಾಮಗಳನ್ನು ಕುರಿತು.

73. ಸರ್ವನಾಮವೆಂದರೆ, ನಾಮಪದಕ್ಕೆ ಪ್ರತಿಯಾಗಿ ಹೇಳುವ ಶಬ್ದವು. ಅದಕ್ಕೆ ಸಂಬೋಧನೆ ಇಲ್ಲ.

74. ಸರ್ವನಾಮಗಳು ಮೂರು ವಿಧ: ಪುರುಷಾರ್ಥಕ, ಆತ್ಮಾರ್ಥಕ, ಪ್ರಶ್ನಾರ್ಥಕ.

75. ಪುರುಷಾರ್ಥಕವಾದವುಗಳು, ನಾ, ನೀ, ಅವ, ಇವ, ಆತ ಈತ, ಆಕೆ, ಈಕೆ, ಅದು.

76. ಆತ್ಮಾರ್ಥಕವಾದದ್ದು, ತಾ.

77. ಪ್ರಶ್ನಾರ್ಥಕವಾದವುಗಳು, ಯಾವ, ಏನು.

78. ಪುರುಷಾರ್ಥಕ ಸರ್ವನಾಮಗಳಲ್ಲಿ, ನಾ, ಉತ್ತಮ ಪುರುಷ; ನೀ ಮಧ್ಯಮ ಪುರುಷ; ಅವ, ಅದು, ಮೊದಲಾದವುಗಳು ಪ್ರಥಮ ಪುರುಷವೆಂದು ಹೇಳಲ್ಪಡುವವು.

79. ಆತ್ಮಾರ್ಥಕವಾದ ತಾ ಎಂಬುವದು ತನ್ನ ಹಿಂದೆ ಬರುವ ಶಬ್ದಕ್ಕೆ ಸಮ್ಬಂಧವಾಗಿರುತ್ತದೆ.

80. ಪ್ರಶ್ನಾರ್ಥಕವಾದದ್ದು ಪ್ರಶ್ನೆ ಕೇಳುವದು.

---

81. ನಾ ಶಬ್ದ.

	ಏಕವಚನ.	ಬಹುವಚನ.
ಪ್ರ.	ನಾನು	ನಾವು
ದ್ವಿ.	ನನ್ನ, ನನ್ನನ್ನು	ನಮ್ಮ, ನಮ್ಮನ್ನು
ತೃ.	ನನ್ನಿಂದ	ನಮ್ಮಿಂದ
ಚ.	ನನಗೆ	ನಮಗೆ
ಪ.	ನನ್ನದೆಸೆಯಿಂದ	ನಮ್ಮದೆಸೆಯಿಂದ
ಷ.	ನನ್ನ	ನಮ್ಮ
ಸ.	ನನ್ನಲ್ಲಿ	ನಮ್ಮಲ್ಲಿ

PRONOUNS.

82. ನೀ ಶಬ್ದ.

	ಏಕವಚನ.	ಬಹುವಚನ.
ಪ್ರ.	ನೀನು	ನೀವು
ದ್ವಿ.	ನಿನ್ನ, ನಿನ್ನನ್ನು	ನಿಮ್ಮ, ನಿಮ್ಮನ್ನು
ತೃ.	ನಿನ್ನಿಂದ	ನಿಮ್ಮಿಂದ
ಚ.	ನಿನಗೆ	ನಿಮಗೆ
ಪ.	ನಿನ್ನದೆಸೆಯಿಂದ	ನಿಮ್ಮದೆಸೆಯಿಂದ
ಷ.	ನಿನ್ನ	ನಿಮ್ಮ
ಸ.	ನಿನ್ನಲ್ಲಿ	ನಿಮ್ಮಲ್ಲಿ

83. ಅವ ಶಬ್ದ.

ಪ್ರ.	ಅವನು	ಅವರು
ದ್ವಿ.	ಅವನ, ಅವನನ್ನು	ಅವರ, ಅವರನ್ನು
ತೃ.	ಅವನಿಂದ	ಅವರಿಂದ
ಚ.	ಅವನಿಗೆ	ಅವರಿಗೆ
ಪ.	ಅವನದೆಸೆಯಿಂದ	ಅವರದೆಸೆಯಿಂದ
ಷ.	ಅವನ	ಅವರ
ಸ.	ಅವನಲ್ಲಿ	ಅವರಲ್ಲಿ

ಹೀಗೆ ಇವ ಶಬ್ದಗಳನ್ನು ಹೇಳಿಕೊಳ್ಳುವದು.

PRONOUNS.

84. ಏಕವಚನದಲ್ಲಿ ಆತ ಈತ ಶಬ್ದಗಳು ಅವನು ಶಬ್ದದ ಹಾಗೆ ರೂಪವಾಗುತ್ತವೆ. ಇವುಗಳಿಗೆ ಬಹುವಚನವಿಲ್ಲ.

85. ಏಕವಚನದಲ್ಲಿ ಆಕೆ ಈಕೆ ಶಬ್ದಗಳಿಗೆ ಸ್ತ್ರೀ ಶಬ್ದದ ಹಾಗೆ ರೂಪವಾಗುತ್ತವೆ. ಇವುಗಳಿಗೆ ಬಹುವಚನವಿಲ್ಲ.

---

86. ಅದು ಶಬ್ದ.

	ಏಕವಚನ.	ಬಹುವಚನ.
ಪ್ರ.	ಅದು	ಅವು, ಅವುಗಳು
ದ್ವಿ.	ಅದ, ಅದನ್ನು	ಅವ, ಅವನ್ನು, ಅವುಗಳ, ಅವುಗಳನ್ನು
ತೃ.	ಅದರಿಂದ	ಅವುಗಳಿಂದ
ಚ.	ಅದಕ್ಕೆ	ಅವಕ್ಕೆ, ಅವುಗಳಿಗೆ
ಪ.	ಅದರದೆಸೆಯಿಂದ	ಅವುಗಳದೆಸೆಯಿಂದ
ಷ.	ಅದರ	ಅವುಗಳ
ಸ.	ಅದರಲ್ಲಿ	ಅವುಗಳಲ್ಲಿ

ಹೀಗೆ ಇದು ಶಬ್ದಕ್ಕೆ ವಿಭಕ್ತಿಗಳನ್ನು ಹೇಳಿಕೊಳ್ಳುವದು.

PRONOUNS.

87. ತಾ ಶಬ್ದ.

ಏಕವಚನ.		ಬಹುವಚನ.
ಪ್ರ.	ತಾನು	ತಾವು
ದ್ವಿ.	ತನ್ನ, ತನ್ನನ್ನು	ತಮ್ಮ, ತಮ್ಮನ್ನು
ತೃ.	ತನ್ನಿಂದ	ತಮ್ಮಿಂದ
ಚ.	ತನಗೆ	ತಮಗೆ
ಪ.	ತನ್ನದೆಸೆಯಿಂದ	ತಮ್ಮದೆಸೆಯಿಂದ
ಷ.	ತನ್ನ	ತಮ್ಮ
ಸ.	ತನ್ನಲ್ಲಿ	ತಮ್ಮಲ್ಲಿ

88. ಯಾವ ಶಬ್ದ ಮೂರು ಲಿಂಗಗಳಲ್ಲಿ ಹೇಳಲ್ಪಡುವದು; ಪುಂ ಸ್ತ್ರೀಲಿಂಗಗಳಲ್ಲಿ ಅವ ಶಬ್ದದ ಹಾಗೆ ರೂಪವಾಗುತ್ತದೆ ; ನಪುಂಸಕದಲ್ಲಿ ಅದು ಶಬ್ದದ ಹಾಗೆ ಆಗುತ್ತದೆ.

89. ಏನು ಶಬ್ದ ನಿತ್ಯ ಏಕವಚನ.

90. ಪ್ರ. ಏನು; ದ್ವಿ. ಏನು, ಏನ; ತೃ. ಯಾತರಿಂದ; ಚ. ಯಾತಕ್ಕೆ, ಯಾಕೆ; ಪ. ಯಾತರದೆಸೆಯಿಂದ; ಷ. ಯಾತರ, ಸ. ಯಾತರಲ್ಲಿ. ಅಪರೂಪವಾಗಿ—ಏತರಿಂದ—ಏತಕ್ಕೆ, ಏಕೆ, ಏತರ, ಏತರಲ್ಲಿ ಎಂಬ ರೂಪಗಳು ಬರುತ್ತವೆ.

VERBS.

ಕ್ರಿಯಾಪದಗಳನ್ನು ಕುರಿತು.

91. ಕ್ರಿಯಾಪದವಂದರೆ, ಇರೋಣ, ಪಡೋಣ, ಮಾಡೋಣ, ಮೊದಲಾದ ಕ್ರಿಯೆಗಳನ್ನು ಹೇಳುವ ಮಾತು.

92. ಅದರ ಮೂಲಾಕ್ಷರಗಳು ಮಾತ್ರ ಇದ್ದರೆ, ಧಾತು ಎಂದು ಹೇಳಲ್ಪಡುವದು. ಉದಾ. ಓದು, ಇಳಿ, ಕರೆ, ಇತ್ಯಾದಿ.

93. ಕ್ರಿಯಾಪದಗಳಿಗೆ ಪುರುಷ, ಲಿಂಗ, ವಚನ, ಕಾಲ ಭೇದಗಳುಂಟು.

94. ಅವುಗಳಿಗೆ, ಸರ್ವನಾಮಗಳಿಗೆ ಶೇರುವ ಪ್ರಕಾರವಾಗಿ, ಉತ್ತಮ, ಮಧ್ಯಮ, ಪ್ರಥಮ ಪುರುಷ ಎಂಬ ಹೆಸರು ಆಗುತ್ತವೆ. ಉದಾ. ಉತ್ತಮ ಪುರುಷ, ನಾನು ಮಾಡುತ್ತೇನೆ; ಮಧ್ಯಮ ಪುರುಷ, ನೀನು ಮಾಡುತ್ತೀ; ಪ್ರಥಮ ಪುರುಷ, ಅವನು ಮಾಡುತ್ತಾನೆ.

95 ಮತ್ತು ಅದೇ ಪ್ರಕಾರ ಶೇರುವ ಸರ್ವನಾಮಗಳ ಹಾಗೆ ಲಿಂಗ ವಚನಗಳ ಭೇದವಾಗುತ್ತದೆ. ಆದರೆ ಉತ್ತಮ ಮಧ್ಯಮ ಪುರುಷಗಳಿಗೆ ಲಿಂಗಭೇದವಿಲ್ಲ. ಪ್ರಥಮ ಪುರುಷಕ್ಕೆ ಮೂರು ಲಿಂಗ ಉಂಟು. ಪುಂಸ್ತ್ರೀಲಿಂಗಗಳಿಗೆ ಬಹು ವಚನದಲ್ಲಿ ಭೇದವಿಲ್ಲ.

96. ಅವುಗಳಿಗೆ ಮೂರು ಕಾಲಗಳುಂಟು. ವರ್ತಮಾನ, ಭೂತ, ಭವಿಷ್ಯತ್ತು. ವರ್ತಮಾನ ಈಗಿನ ಕಾಲ; ಭೂತ ಹೋದ ಕಾಲ; ಭವಿಷ್ಯತ್ತು ಬರುವ ಕಾಲ.

97. ಕ್ರಿಯಾಪದಗಳಿಗೆ ಎರಡು ವಿಧವಾದ ರೂಪಗಳು ಉಂಟು: ಅವ್ಯಯ ರೂಪಗಳೂ ಆಖ್ಯಾತ ರೂಪಗಳೂ. ಆಖ್ಯಾತ ರೂಪ ಪೂರ್ಣ ಅರ್ಥ ಕೊಡುತ್ತದೆ. ಅವ್ಯಯ ರೂಪ ಪೂರ್ಣ ಅರ್ಥ ಕೊಡುವದಿಲ್ಲ.

VERBS

98. ಅವ್ಯಯ ರೂಪಗಳು ಯಾವವಂದರೆ, ಭಾವರೂಪಗಳೂ ನ್ಯೂನಗಳೂ. ಇವುಗಳಿಗೆ ಪುರುಷ, ಲಿಂಗ, ವಚನ ಭೇದವಿಲ್ಲ.

99. ಭಾವರೂಪ, ಕಾಲ ಭೇದವಿಲ್ಲದೆ, ಧಾತುವಿನ ಅರ್ಥ ಮಾತ್ರ ಹೇಳುವದು. ಮೂರು ಭಾವರೂಪಗಳು ಉಂಟು. ಉದಾ. ಮಾಡ, ಮಾಡಲು, ಮಾಡಲಿಕ್ಕೆ.

100. ನ್ಯೂನಗಳು ಆಖ್ಯಾತ ರೂಪವಾದ ಕ್ರಿಯಾಪದಕ್ಕಾಗಲಿ, ನಾಮಪದಕ್ಕಾಗಲಿ, ಸರ್ವನಾಮಕ್ಕಾಗಲಿ ಶೇರ ಬೇಕು. ಕ್ರಿಯಾಪದಕ್ಕೆ ಶೇರ ತಕ್ಕ ನ್ಯೂನ ಅನುಸರಣೆ ನ್ಯೂನ, ಇಲ್ಲವೆ ಕ್ರಿಯಾ ನ್ಯೂನವೆಂದೂ, ನಾಮಪದಕ್ಕೆ ಶೇರ ತಕ್ಕದ್ದು ವಿಶೇಷಣ ನ್ಯೂನವೆಂದೂ, ಹೇಳಲ್ಪಡುವವು.

101. ಮೂರು ಅನುಸರಣೆ ನ್ಯೂನಗಳು ಉಂಟು. ಯಾವವಂದರೆ, ವರ್ತಮಾನ, ಭೂತ, ನಿಷೇಧ. ಉದಾ. ಮಾಡುತ್ತಾ, ಮಾಡಿ, ಮಾಡದೆ.

102. ಅವು ಕ್ರಿಯಾಪದಕ್ಕೆ ಶೇರುವ ರೀತಿ ಹ್ಯಾಗಂದರೆ, ಮಾಡುತ್ತಾ ಬಂದನು; ಹೇಳಿ ಕೊಟ್ಟನು; ಕೊಡದೆ ಹೋದನು.

103. ಮೂರು ವಿಶೇಷಣ ನ್ಯೂನಗಳು ಉಂಟು. ಯಾವವಂದರೆ, ವರ್ತಮಾನ, ಇಲ್ಲವೆ ಭವಿಷ್ಯತ್ತು, ಭೂತ, ನಿಷೇಧ. ಉದಾ. ಮಾಡುವ, ಮಾಡಿದ, ಮಾಡದ.

104. ಅವು ನಾಮಪದಕ್ಕೆ ಶೇರುವ ರೀತಿ ಹ್ಯಾಗಂದರೆ, ಮಾಡುವ ಕೆಲಸ, ಹುಟ್ಟಿದ ಕೂಸು, ನೋಡದ ಜನರು. ಹೀಗೆ ಪ್ರಯೋಗಿಸಿದರೆ, ಗುಣವಾಚಕಕ್ಕೆ ಸಮಾನವಾಗಿ ನಾಮಪದಕ್ಕೆ ವಿಶೇಷಣವಾಗಿದೆ.

VERBS.

105. ಆಖ್ಯಾತ ರೂಪಗಳು ಯಾವವಂದರೆ, ವರ್ತಮಾನ, ಭೂತ, ಭವಿಷ್ಯತ್ತು, ಸಂಶಯ, ವಿಧಿ, ನಿಷೇಧ ರೂಪಗಳು.

106. ಇವುಗಳಿಗೆ ಪುರುಷ, ಲಿಂಗ, ವಚನಗಳ ಭೇದವುಂಟು.

107. ಆಖ್ಯಾತವಾದ ವರ್ತಮಾನ, ಭೂತ, ಭವಿಷ್ಯತ್ತು ರೂಪಗಳು ಮೂರು ಕಾಲಗಳಲ್ಲಿ ಸಂಭವಿಸುವ ಕಾರ್ಯಗಳನ್ನು ನಿಶ್ಚಯವಾಗಿ ತಿಳಿಸುತ್ತವೆ. ಉದಾ. ವರ್ತ. ನಾನು ಬರೆಯುತ್ತೇನೆ. ಭೂತ. ನಾನು ಬರೆದೆನು. ಭವಿ. ನಾನು ಬರೆಯುವೆನು.

108. ಸಂಶಯ ರೂಪ, ಮುಂದಿನ ಕಾರ್ಯವನ್ನು ಸಂದೇಹವಾಗಿ ಹೇಳುವದು. ಉದಾ. ಮಾಡಿಯೇನು; ನುಡಿದೇನು. ಪುರುಷ ಪ್ರತ್ಯಯಗಳನ್ನು ಭೂತ ಅನುಸರಣೆ ನ್ಯೂನದ ಮೇಲೆ ಶೇರಿಸಿದರೆ, ಈ ರೂಪವಾಗುತ್ತದೆ.

109. ವಿಧಿ, ಆಜ್ಞಾಪಿಸುವದನ್ನೂ ಬೇಡುವದನ್ನೂ ಹೇಳುವದು. ಉದಾ. ಮಾಡು.

110. ನಿಷೇಧ, ಇಲ್ಲವೆಂಬ ಅರ್ಥವನ್ನು ಹೇಳುವದು. ಉದಾ. ಮಾಡನು.

ಮೇಲೆ ಹೇಳಿದ ರೂಪಗಳನ್ನು ರೂಪಿಸುವದು.

111. ಆಯಾ ರೂಪಕ್ಕೆ ಅದರ ಸ್ವಂತ ಪ್ರತ್ಯಯಗಳನ್ನು ಸಂಧಿಯ ನ್ಯಾಯಗಳ ಪ್ರಕಾರ ಶೇರಿಸ ಬೇಕು.

VERBS.

ಧಾತುವಿನ ಮೇಲೆ ಹತ್ತ ತಕ್ಕ ಪ್ರತ್ಯಯಗಳು.

1. ಭಾವರೂಪ ಪ್ರತ್ಯಯಗಳು. ಮತ್ತು ಹತ್ತುವ ಹಾಗೆ, ಧಾತು ಉಕಾರಾಂತವಾದರೆ, ಅದರ ಉಕಾರ ಲೋಪವಾಗ ಬೇಕು; ಇಕಾರಾಂತ ಎಕಾರಾಂತವಾದರೆ, ಯ ಆಗಮ ಬರ ಬೇಕು. ಉದಾ.

ಧಾತು	ಪ್ರತ್ಯಯಗಳು.	ರೂಪಗಳು.		
ಮಾಡ್	ಅ, ಅಲು, ಅಲಿಕ್ಕೆ.	ಮಾಡ	ಮಾಡಲು	ಮಾಡಲಿಕ್ಕೆ.
ನುಡಿ	— — —	ನುಡಿಯ	ನುಡಿಯಲು	ನುಡಿಯಲಿಕ್ಕೆ.
ಬರೆ	— — —	ಬರೆಯ	ಬರೆಯಲು	ಬರೆಯಲಿಕ್ಕೆ.

2. ನ್ಯೂನ ಪ್ರತ್ಯಯಗಳು. ಅನುಸರಣೆ ನ್ಯೂನ ಪ್ರತ್ಯಯಗಳು:—ಉತ್ತಾ, ಇ, ಅದೆ. ವಿಶೇಷಣ ನ್ಯೂನ ಪ್ರತ್ಯಯಗಳು:—ಉವ, ಇದ, ಅದ, ಉದಾ.

ಧಾತು.	ಪ್ರತ್ಯಯಗಳು.	ರೂಪಗಳು.
ಮಾಡ್	ಉತ್ತಾ, ಇ, ಇದು, ಅದೆ.	ಮಾಡುತ್ತಾ, ಮಾಡಿ, ಮಾಡದೆ
ನುಡಿ		ನುಡಿಯುತ್ತಾ, ನುಡಿದು, ನುಡಿಯದೆ.
ಬರೆ		ಬರೆಯುತ್ತಾ, ಬರೆದು, ಬರೆಯದೆ.
ಮಾಡ್	ಉವ, ಇದ, ಅದ.	ಮಾಡುವ, ಮಾಡಿದ, ಮಾಡದ.
ನುಡಿ		ನುಡಿಯುವ, ನುಡಿದ, ನುಡಿಯದ.
ಬರೆ		ಬರೆಯುವ, ಬರೆದ, ಬರೆಯದ.

VERBS.

3. ವಿಧಿ ಪ್ರತ್ಯಯಗಳು. ಉದಾ.

ಧಾತು.	ಪ್ರತ್ಯಯಗಳು.	ರೂಪಗಳು.
ಮಾಡ್	ಅಲಿ, ಉ, ಅಲಿ, ಉವ, ಇರಿ, ಅಲಿ.	ಮಾಡಲಿ, ಮಾಡು, ಮಾಡಲಿ. ಮಾಡುವ, ಮಾಡಿರಿ, ಮಾಡಲಿ.
ನುಡಿ		ನುಡಿಯಲಿ, ನುಡಿ, ನುಡಿಯಲಿ. ನುಡಿಯುವ, ನುಡಿಯಿರಿ, ನುಡಿಯಲಿ.
ಬರೆ		ಬರೆಯಲಿ, ಬರೆ, ಬರೆಯಲಿ. ಬರೆಯುವ, ಬರೆಯಿರಿ, ಬರೆಯಲಿ.

4. ನಿಷೇಧ ಪ್ರತ್ಯಯಗಳು. ಉದಾ.

ಧಾತು.	ಪ್ರತ್ಯಯಗಳು.	ರೂಪಗಳು.
ಮಾಡ್	ಎನು, ಎ, ಅನು, ಅದು, ಎವು, ಅರಿ, ಅರು, ಅವು.	ಮಾಡೆನು, ಮಾಡೆ, ಮಾಡನು, ಮಾಡದು. ಮಾಡೆವು, ಮಾಡಿರಿ, ಮಾಡರು, ಮಾಡವು.
ನುಡಿ		ನುಡಿಯೆನು, ನುಡಿಯೆ, ನುಡಿಯನು, ನುಡಿಯಳು, ನುಡಿಯದು. ನುಡಿಯೆವು, ನುಡಿಯರಿ, ನುಡಿಯರು, ನುಡಿಯವು.
ಬರೆ		ಬರೆಯೆನು, ಬರೆಯೆ, ಬರೆಯನು, ಬರೆಯಳು, ಬರೆಯದು. ಬರೆಯೆವು, ಬರೆಯರಿ, ಬರೆಯರು, ಬರೆಯವು.

ನ್ಯೂನಗಳ ಮೇಲೆ ಹತ್ತ ತಕ್ಕ ಪ್ರತ್ಯಯಗಳು.
ಆಖ್ಯಾತ ಪುರುಷಾರ್ಥಕ ಪ್ರತ್ಯಯಗಳೇ.

VERBS.

1. ವರ್ತಮಾನ. ಪ್ರತ್ಯಯಗಳು ವರ್ತಮಾನ ಅನುಸರಣೆ ನ್ಯೂನದ ಮೇಲೆ ಶೇರ ಬೇಕು. ಉದಾ.

ವ. ಅ. ನ್ಯೂ.	ಪ್ರತ್ಯಯಗಳು.	ರೂಪಗಳು.
ಮಾಡುತ್ತ	ಏನೆ, ಈ, ಆನೆ, ಆಳೆ, ಅದೆ. ಏವೆ, ಈರಿ, ಆರೆ, ಅವೆ.	ಮಾಡುತ್ತೇನೆ, ಮಾಡುತ್ತೀ, ಮಾಡುತ್ತಾನೆ, ಮಾಡುತ್ತಾಳೆ, ಮಾಡುತ್ತದೆ; ಮಾಡುತ್ತೇವೆ, ಮಾಡುತ್ತೀರಿ, ಮಾಡುತ್ತಾರೆ, ಮಾಡುತ್ತವೆ.

2. ಭೂತ ಪ್ರತ್ಯಯಗಳು ಭೂತ ವಿಶೇಷಣ ನ್ಯೂನದ ಮೇಲೆ ಶೇರ ಬೇಕು. ಉದಾ.

ವಿ. ನ್ಯೂ.	ಪ್ರತ್ಯಯಗಳು.	ರೂಪಗಳು.
ಮಾಡಿದ	ಎನು, ಇ, ಅನು, ಅಳು, ಇತು ಎವು, ಇರಿ, ಅರು, ಅವು.	ಮಾಡಿದೆನು ಮಾಡಿದಿ, ಮಾಡಿದನು, ಮಾಡಿದಳು, ಮಾಡಿತು; ಮಾಡಿದೆವು, ಮಾಡಿದಿರಿ, ಮಾಡಿದರು, ಮಾಡಿದವು.

3. ಭವಿಷ್ಯತ್ ಪ್ರತ್ಯಯಗಳು ವರ್ತಮಾನ ವಿಶೇಷಣ ನ್ಯೂನದ ಮೇಲೆ ಶೇರ ಬೇಕು. ಉದಾ.

ವಿ. ನ್ಯೂ.	ಪ್ರತ್ಯಯಗಳು.	ರೂಪಗಳು.
ಮಾಡ್	ಎನು, ಇ, ಅನು, ಅಳು, ಅದು, ಎವು, ಇರಿ ಅರು, ಅವು,	ಮಾಡುವೆನು, ಮಾಡುವಿ, ಮಾಡುವನು, ಮಾಡುವಳು. ಮಾಡುವದು. ಮಾಡುವೆವು. ಮಾಡುವಿರಿ, ಮಾಡುವರು. ಮಾಡುವವು.

4. ಸಂಶಯ ಪ್ರತ್ಯಯಗಳು ಭೂತ ಅನುಸರಣೆ ನ್ಯೂನದ ಮೇಲೆ ಶೇರ ಬೇಕು. ಉದಾ.

VERBS.

ಅ. ನ್ಯೂ.	ಪ್ರತ್ಯಯಗಳು.	ರೂಪಗಳು.
ಮಾಡಿ	ಏನು, ಈಯೆ, ಆನು, ಆಳು, ಈತು, ಏವು, ಈರಿ, ಆರು, ಆವು.	ಮಾಡಿಯೇನು, ಮಾಡೀಯೇ, ಮಾಡ್ಯಾನು, ಮಾಡ್ಯಾಳು, ಮಾಡೀತು. ಮಾಡೇವು, ಮಾಡೀರಿ, ಮಾಡ್ಯಾರು. ಮಾಡ್ಯಾವು.

ಕೆಳಗೆ ಬರುವ ಕ್ರಿಯಾಮಾಲೆಯಲ್ಲಿ ಎರಡು ಉದಾಹರಣೆಗಳು ಕೊಡಲ್ಪಟ್ಟಿವೆ; ಉಕಾರಾಂತ ಮಾಡು ಧಾತು ಒಂದೂ, ಇಕಾರಾಂತ ನುಡಿ ಧಾತು ಒಂದೂ. ಉಕಾರಾಂತ ಧಾತುಗಳೆಲ್ಲಾ ಮಾಡು ಧಾತುವಿನ ಹಾಗೆ, ಇಕಾರಾಂತ ಎಕಾರಾಂತ ಧಾತುಗಳೆಲ್ಲಾ ನುಡಿ ಧಾತುವಿನ ಹಾಗೆ ಆಗುತ್ತವೆ.

ಮಾಡು ಧಾತು.

ಅವ್ಯಯ ರೂಪಗಳು.

1. ಭಾವ ರೂಪಗಳು. ಮಾಡ, ಮಾಡಲು, ಮಾಡಲಿಕ್ಕೆ.

2. ನ್ಯೂನ ರೂಪಗಳು.

ಅನುಸರಣೆ ನ್ಯೂನಗಳು:—ವರ್ತ. ಮಾಡುತ್ತಾ; ಭೂತ. ಮಾಡಿ; ನಿಷೇ. ಮಾಡದೆ.

ವಿಶೇಷಣ ನ್ಯೂನಗಳು:—ವರ್ತ. ಮಾಡುವ; ಭೂತ. ಮಾಡಿದ; ನಿಷೇಧ. ಮಾಡದ.

VERBS.

ಆಖ್ಯಾತರೂಪಗಳು.

ವರ್ತಮಾನಕಾಲ.

		ಏಕವಚನ.	ಬಹುವಚನ.
1.		ಮಾಡುತ್ತೇನೆ.	ಮಾಡುತ್ತೇವೆ.
2.		ಮಾಡುತ್ತೀ.	ಮಾಡುತ್ತೀರಿ.
3.	ಪು.	ಮಾಡುತ್ತಾನೆ.	ಮಾಡುತ್ತಾರೆ.
	ಸ್ತ್ರೀ.	ಮಾಡುತ್ತಾಳೆ.	
	ನ.	ಮಾಡುತ್ತದೆ.	ಮಾಡುತ್ತವೆ.

ಭೂತಕಾಲ.

1.		ಮಾಡಿದೆನು.	ಮಾಡಿದೆವು.
2.		ಮಾಡಿದಿ.	ಮಾಡಿದಿರಿ.
3.	ಪು.	ಮಾಡಿದನು.	ಮಾಡಿದರು.
	ಸ್ತ್ರೀ.	ಮಾಡಿದಳು.	
	ನ.	ಮಾಡಿತು.	ಮಾಡಿದವು.

ಭವಿಷ್ಯತ್ಕಾಲ.

1.		ಮಾಡುವೆನು.	ಮಾಡುವೆವು.
2.		ಮಾಡುವಿ.	ಮಾಡುವಿರಿ.

VERBS.

		ಏಕವಚನ.	ಬಹುವಚನ.
3.	ಪು.	ಮಾಡುವನು.	ಮಾಡುವರು.
	ಸ್ತ್ರೀ.	ಮಾಡುವಳು.	
	ನ.	ಮಾಡುವದು.	ಮಾಡುವವು.

ಸಂಶಯರೂಪ.

1.		ಮಾಡಿಯೇನು.	ಮಾಡಿಯೇವು.
2.		ಮಾಡೀಯೆ.	ಮಾಡೀರಿ.
3.	ಪು.	ಮಾಡಿಯಾನು.	ಮಾಡ್ಯಾರು.
	ಸ್ತ್ರೀ.	ಮಾಡಿಯಾಳು.	
	ನ.	ಮಾಡೀತು.	ಮಾಡಿಯಾವು.

ನಿಷೇಧ.

1.		ಮಾಡೆನು.	ಮಾಡೆವು.
2.		ಮಾಡೆ.	ಮಾಡರಿ.
3.	ಪು.	ಮಾಡನು.	ಮಾಡರು.
	ಸ್ತ್ರೀ.	ಮಾಡಳು.	
	ನ.	ಮಾಡದು.	ಮಾಡವು.

ವಿಧಿ.

1.	ಮಾಡಲಿ.	ಮಾಡುವ, ಮಾಡೋಣ.
2.	ಮಾಡು.	ಮಾಡಿ, ಮಾಡಿರಿ.

3 { ಪು / ಸ್ತ್ರೀ. / ನ. }	ಮಾಡಲಿ.	ಮಾಡಲಿ.

---

112. ನುಡಿ ಧಾತು.

ಅವ್ಯಯ ರೂಪಗಳು.

1. ಭಾವರೂಪ. ಮಾಡ, ಮಾಡಲು, ಮಾಡಲಿಕ್ಕೆ.
2. ನ್ಯೂನ ರೂಪಗಳು.

	ವರ್ತಮಾನ.	ಭೂತ.	ನಿಷೇಧ.
ಅನು. ನ್ಯೂನ.	ನುಡಿಯುತ್ತಾ.	ನುಡಿದು.	ನುಡಿಯದೆ.
ವಿಶೇ. ನ್ಯೂನ.	ನುಡಿಯುವ.	ನುಡಿದ.	ನುಡಿಯದ.

ಆಖ್ಯಾತ ರೂಪಗಳು.

ವರ್ತಮಾನಕಾಲ

	ಏಕವಚನ.	ಬಹುವಚನ.
1.	ನುಡಿಯುತ್ತೇನೆ.	ನುಡಿಯುತ್ತೇವೆ.
2.	ನುಡಿಯುತ್ತೀ.	ನುಡಿಯುತ್ತೀರಿ.

VERBS.

		ಏಕವಚನ.	ಬಹುವಚನ.
3.	ಪು.	ನುಡಿಯುತ್ತಾನೆ.	ನುಡಿಯುತ್ತಾರೆ.
	ಸ್ತ್ರೀ.	ನುಡಿಯುತ್ತಾಳೆ.	
	ನ.	ನುಡಿಯುತ್ತದೆ.	ನುಡಿಯುತ್ತವೆ.

ಭೂತಕಾಲ.

1.		ನುಡಿದೆನು.	ನುಡಿದೆವು.
2.		ನುಡಿದಿ.	ನುಡಿದಿರಿ.
3.	ಪು.	ನುಡಿದನು.	ನುಡಿದರು.
	ಸ್ತ್ರೀ.	ನುಡಿದಳು.	
	ನ.	ನುಡಿಯಿತು.	ನುಡಿದವು.

ಭವಿಷ್ಯತ್ಕಾಲ.

1.		ನುಡಿಯುವೆನು.	ನುಡಿಯುವೆವು.
2.		ನುಡಿಯುವಿ.	ನುಡಿಯುವಿರಿ.
3.	ಪು.	ನುಡಿಯುವನು.	ನುಡಿಯುವರು.
	ಸ್ತ್ರೀ.	ನುಡಿಯುವಳು.	
	ನ.	ನುಡಿಯುವದು.	ನುಡಿಯುವವು.

ಸಂಶಯ ರೂಪ.

1.		ನುಡಿದೇನು.	ನುಡಿದೇವು.
2.		ನುಡಿದೀಯೆ.	ನುಡಿದೀರಿ.

VERBS.

		ಏಕವಚನ.	ಬಹುವಚನ.
3.	ಪು.	ನುಡಿದಾನು.	ನುಡಿದಾರು.
	ಸ್ತ್ರೀ.	ನುಡಿದಾಳು.	
	ನ.	ನುಡಿದೀತು.	ನುಡಿದಾವು.

ನಿಷೇಧ.

1.		ನುಡಿಯೆನು.	ನುಡಿಯೆವು.
2.		ನುಡಿಯೆ.	ನುಡಿಯರಿ.
3.	ಪು.	ನುಡಿಯನು.	ನುಡಿಯರು.
	ಸ್ತ್ರೀ.	ನುಡಿಯಳು.	
	ನ.	ನುಡಿಯದು.	ನುಡಿಯವು.

ವಿಧಿ.

1.		ನುಡಿಯಲಿ.	ನುಡಿಯುವ.	ನುಡಿಯೋಣ.
2.		ನುಡಿ.	ನುಡಿಯಿರಿ.	
3.	ಪು. ಸ್ತ್ರೀ. ನ.	ನುಡಿಯಲಿ.	ನುಡಿಯಲಿ.	

ಸಂಯುಕ್ತ ರೂಪಗಳು.

113. ಭಾವರೂಪದ ಮೇಲೆಯೂ, ವಿಶೇಷಣ ನ್ಯೂನಗಳ ಮೇಲೆಯೂ, ಬೇರೆ ಅವ್ಯಯ ಪ್ರತ್ಯಯಗಳು ಸೇರುತ್ತವೆ. ಹೀಗೆ ಒಂದೇ ಕ್ರಿಯಾಪದದಲ್ಲಿ ಎರಡು ಅವ್ಯಯಗಳು ಕೂಡುವದರಿಂದ ಅದಕ್ಕೆ ಸಂಯುಕ್ತ ರೂಪವೆಂದು ಹೇಳಲ್ಪಡುವದು. ಉದಾ.

ಭಾವರೂಪ.	ಮಾಡಲು.	ಆಗಿ	ಮಾಡಲಾಗಿ
ವಿಶೇಷಣ ನ್ಯೂನ.	ಮಾಡುವ.	ಆಗ	ಮಾಡುವಾಗ
		ಆಗ್ಯೆ	ಮಾಡುವಾಗ್ಯೆ
		ಅಲ್ಲಿ	ಮಾಡುವಲ್ಲಿ
ವಿಶೇಷಣ ನ್ಯೂನ.	ಮಾಡಿದ.	ಆಗ	ಮಾಡಿದಾಗ
		ಆಗ್ಯೂ	ಮಾಡಿದಾಗ್ಯೂ
		ರೆ	ಮಾಡಿದರೆ
		ರೂ	ಮಾಡಿದರೂ.

ಇವುಗಳಲ್ಲಿ ಮಾಡಲಾಗಿ, ಮಾಡುವಾಗ, ಮಾಡುವಾಗ್ಯೆ, ಮಾಡುವಲ್ಲಿ, ಮಾಡಿದಾಗ, ಎಂಬವುಗಳು ಸಮ ಕಾಲ ಅರ್ಥವನ್ನು ಹೇಳುತ್ತವೆ; ಮಾಡಿದರೆ, ಮಾಡಿದರೂ, ಮಾಡಿದಾಗ್ಯೂ, ಎಂಬವುಗಳು ಸಂದೇಹಾರ್ಥವನ್ನು ಹೇಳುತ್ತವೆ.

VERBS.

ವಿಕಾರವಾದ ಕ್ರಿಯಾಪದಗಳು.

114. ಮೇಲೆ ಹೇಳಿರುವ ಕ್ರಮವನ್ನು ಬಿಟ್ಟು ಬೇರೆ ರೂಪ ಹೊಂದು ವ ಕ್ರಿಯಾಪದಗಳು ವಿಕಾರವಾದ ಕ್ರಿಯಾಪದಗಳು.

115. ಇವುಗಳಲ್ಲಿ ಅನೇಕ ಕ್ರಿಯಾಪದಗಳು, ಆಖ್ಯಾತ ಭೂತ ಸಂಶಯ ರೂಪಗಳಲ್ಲಿಯೂ, ಭೂತ ಅನುಸರಣೆ ನ್ಯೂನದಲ್ಲಿಯೂ, ಭೂತ ವಿಶೇಷಣ ನ್ಯೂನದಲ್ಲಿಯೂ ವಿಕಾರವಾಗುತ್ತವೆ. ಆದರೆ ಆ ಖ್ಯಾತ ಭೂತ ಸಂಶಯ ರೂಪಗಳು ಯಾವಾಗಲೂ ಭೂತ ವಿಶೇಷಣ ನ್ಯೂನದಿಂದ ಆಗುವ ಕಾರಣ, ಮುಂದೆ ಹೇಳಿರುವ ಉದಾಹರಣೆಗಳಲ್ಲಿ ಈ ರೂಪಗಳನ್ನು ತೋರಿಸ ನಿಮಿತ್ತವಿಲ್ಲ. ಆದರೆ ಕೆಲವುಗಳಿಗೆ ಭೂತ ನಪುಂಸಕ ಪ್ರಥಮ ಏಕವಚನ ಕ್ರಮವಾಗಿ ಬರುತ್ತದೆ. ಕೆಲವುಗಳಿಗೆ ವಿಕಾರವಾಗಿ ಬರುತ್ತದೆ. ಆದಕಾರಣ ಅದರ ರೂಪ ತೋರಿಸ ಬೇಕು.

ವಿಕಾರ ಭೂತರೂಪಗಳ ಪಟ್ಟಿ.

ಧಾತು.	ಭೂತ. ಅನು. ನ್ಯೂನ	ಭೂತ ವಿಶೇ. ನ್ಯೂನ.	ಭೂತ ಆಖ್ಯಾತ ನಪುಂಸ ಕೈಕವಚನ.	ಉದಾಹರಣೆಗೆ ಸರಿಯಾದ ಧಾತುಗಳು.
ಬಿರಿ	ಬಿರಿದು ಬಿರಿತು	ಬಿರಿದ ಬಿರಿತ	ಬಿರಿಯಿತು.	ಬಿರಿ, ಬಳಿ, ಅಲೆ, ಮುನಿ, ಅಸೆ, ಎಸೆ, ಕಿಸಿ, ಕುಸಿ, ನು ಸಿ, ಬಸಿ, ಬೆಸೆ, ಮಸೆ, ಹಸಿ, ಹಿಸಿ, ಹುಸಿ, ಹೊಸೆ, ದುಡಿ.

VERBS.

ಧಾತು.	ಭೂತ ಅಸು. ನ್ಯೂನ.	ಭೂತ. ವಿಶೇ. ನ್ಯೂನ.	ಭೂತ ಅಭಿವ್ಯಕ್ತ. ನಪುಂಸಕೈಕವಚನ.	ಉದಾಹರಣೆಗೆ ಸರಿಯಾದ ಧಾತುಗಳು.
ಅರಿ.	ಅರಿತು	ಅರಿತ	ಅಱಯಿತು	ಅರಿ, ಕುರಿ, ಪುರೆ, ಶೆದರು, ಅವಿ, ಕಮಿ, ಬಕಿ, ಮತೆ, ಕಳೆ, ಕೊಳೆ, ಚಳಿ, ಮೊಳೆ.
ಬಾ	ಬಾತು	ಬಾತ	ಬಾತಿತು	ಬಾ, ಬೀ, ಕೀ, ಹೂ.
ಬೆವರು	ಬೆವರ್ತು	ಬೆವರ್ತ	ಬೆವರ್ತಿತು	ಬೆವರು, ಕೊನರು, ಬೆಗುರು, ತಳಿರು, ಮಿಳಿರು, ಕವಲು, ಮುಗಲು.
ಒಡೆ	ಒದ್ದು	ಒದ್ದ	ಒದ್ದಿತು	ಒಡೆ, ಕಡಿ, ಹಡಿ, ಹೊಡಿ.
ಮಿದಿ	ಮಿತ್ತು	ಮಿತ್ತ	ಮಿತ್ತಿತು	ಮಿದಿ
ಅನ್ಪು	ಅಂದು	ಅಂದ	ಅಂದಿತು	ಅನ್ಪು, ಎನ್ಪು, ತಿನ್ಪು.
ಉಣ್ಣು	ಉಂಡು	ಉಂಡ	ಉಂಡಿತು	ಉಣ್ಣು, ಕಾಣು, ಕೊಳ್ಳು.

VERBS.

ಧಾತು.	ಭೂತ ಅನು. ನ್ಯೂನ.	ಭೂತ. ವಿಶೇ. ನ್ಯೂನ	ಭೂತ. ಆಖ್ಯಾತ ನಪುಂಸ ಕೈಕವಚನ.	ಉದಾಹರಣೆಗೆ ಸರಿಯಾದ ಧಾತುಗಳು.
ಕೊಲ್ಲು	ಕೊಂದು	ಕೊಂದ	ಕೊಂದಿತು	ಕೊಲ್ಲು, ಸಲ್ಲು, ತೆರು, ಬರು.
ನಿಲ್ಲು	ನಿಂತು	ನಿಂತ	ನಿಂತಿತು	ನಿಲ್ಲು.
ಗೆಲ್ಲು	ಗೆದ್ದು	ಗೆದ್ದ	ಗೆದ್ದಿತು	ಗೆಲ್ಲು, ಮೆಲ್ಲು, ಕಳು, ಇರು.
ಹೊರು	ಹೊತ್ತು	ಹೊತ್ತ	ಹೊತ್ತಿತು	ಹೊರು, ಆಸರು, ಎಚ್ಚರು, ತೆರು, ಬೇಸರು, ಹೆರು, ಅಳು, ಉಳು.
ಏಳು	ಎದ್ದು	ಎದ್ದ	ಎದ್ದಿತು	ಏಳು, ಬೀಳು.
ಕೀಳು	ಕಿತ್ತು	ಕಿತ್ತ	ಕಿತ್ತಿತು	ಕೀಳು.
ಇಡು	ಇಟ್ಟು	ಇಟ್ಟ	ಇಟ್ಟಿತು	ಇಡು, ಅಡು, ಉಡು, ಕೆಡು, ಕೊಡು, ತೊಡು, ನೆಡು, ಪಡು, ಬಿಡು, ಮಡು, ಸುಡು.

VERBS.

ಧಾತು.	ಭೂತ ಅನು. ನ್ಯೂನ.	ಭೂತ ವಿಶೇ. ನ್ಯೂನ.	ಭೂತ. ಆಖ್ಯಾತ ನಪುಂಸಕೈಕವಚ.	ಉದಾಹರಣೆಗೆ ಸರಿಯಾದ ಧಾತುಗಳು.
ನಗು	ನಕ್ಕು	ನಕ್ಕ	ನಕ್ಕಿತು	ನಗು, ಉಗು, ಬಿಗು, ಮುಗು, ಹೊಗು.
ಬಿಸಾಡು	ಬಿಸಾಟು	ಬಿಸಾಟ	ಬಿಸಾಟಿತು	ಬಿಸಾಡು, ಬಿಸುಡು, ಹೊರಡು.
ಈನು	ಈದು	ಈದ	ಈಯಿತು	ಈನು.
ಸೀನು	ಸೀತು	ಸೀತ	ಸೀತಿತು	ಸೀನು, ಆನು, ನೋನು, ಕೂರು, ಜೋಲು, ನೂಲು, ನೇಲು, ಸಾಲು, ಸೋಲು, ಹೋಲು.
ನೋ	ನೊಂದು	ನೊಂದ	ನೊಂದಿತು	ನೋ, ಬೇ, ಮೀ.
ಈ	ಇತ್ತು	ಇತ್ತ	ಇತ್ತಿತು	ಈ, ಸಾ.
ಆಗು	ಆಗಿ	ಆದ	ಆಯಿತು	ಆಗು, ಹೋಗು.

116. ಸಲ್ಲು, ತರು, ಬರು, ಇರು, ಬೀಳು ಎಂಬ ಧಾತುಗಳಿಗೆ ಭೂ

ತ ಆಖ್ಯಾತ ನಪುಂಸಕೈಕ ವಚನದಲ್ಲಿ ಸಂಕ್ಷೇಪಿತ ರೂಪ ಬರುವದು. ಹ್ಯಾಗಂದರೆ, ಸಂತು, ತಂತು, ಬಂತು, ಇತ್ತು, ಬಿತ್ತು.

117. ವಿಕಾರವಾದ ಭವಿಷ್ಯದ್ವಿಶೇಷಣ ನ್ಯೂನ ರೂಪಗಳು, ಆಖ್ಯಾತ ಭವಿಷ್ಯದ್ರೂಪಗಳು.

ವಿಶೇಷಣ ನ್ಯೂನ.

(ಅನ್ನು)	ಅಂಬ =	ಅಂಬುವ.
(ಎನ್ನು)	ಎಂಬ =	ಎಂಬುವ.
(ತಿನ್ನು)	ತಿಂಬ =	ತಿಂಬುವ.
(ಉಣ್ಣು)	ಉಂಬ =	ಉಂಬುವ.
(ಕೊಳ್ಳು)	ಕೊಂಬ=	ಕೊಂಬುವ.
(ಕಾಣು)	ಕಾಂಬ =	ಕಾಂಬುವ.

118. ಇವುಗಳ ಮೇಲೆ ಆಖ್ಯಾತ ಪ್ರತ್ಯಯಗಳನ್ನು ಹಚ್ಚಿಸಿದರೆ, ಆಖ್ಯಾತ ಭವಿಷ್ಯದ್ರೂಪ ಆಗುತ್ತದೆ. ಉದಾ.

ಆಖ್ಯಾತ ಭವಿಷ್ಯತ್

ಅಂಬೆನು= ಅಂಬುವೆನು.

ಅಂಬಿ= ಅಂಬುವಿ. ಇತ್ಯಾದಿ.

119. ವಿಕಾರ ನಿಷೇಧ ರೂಪಗಳು.

ಧಾತು.	ನಿ. ಅ. ನ್ಯೂ.	ನಿ. ವಿ ನ್ಯೂ.	ನಿ. ಆಖ್ಯಾತ.	
(ತರು)	ತಾರದೆ	ತಾರದ	ತಾರೆನು—	ಇತ್ಯಾದಿ.
ರು)	ಬಾರದೆ	ಬಾರದ	ಬಾರೆನು—	ಇತ್ಯಾದಿ.

VERBS.

120. ವಿಕಾರ ಮಧ್ಯಮ ವಿಧಿ ರೂಪಗಳು.

ಧಾತು.	ಏಕವಚನ.	ಬಹುವಚನ.
(ತರು)	ತಾ	ತನ್ನಿ= ತರ್ರಿ
(ಬರು)	ಬಾ	ಬನ್ನಿ= ಬರ್ರಿ

121. ವಿಧಿ ಮಧ್ಯಮ ಪುರುಷ ಏಕವಚನದಲ್ಲಿ ಮಾತ್ರ ವಿಕಾರವಾಗುವ ಧಾತುಗಳು ಯಾವವಂದರೆ, ಕಾ, ತೇ, ಮಾ, ಮೇ, ಸಾ. ಎಂಬವುಗಳೇ. ಉದಾ. ಕಾಯಿ, ತೇಯಿ, ಮಾಯಿ, ಮೇಯಿ. ಸಾಯಿ. ಮತ್ತು ಕೊಳ್ಳು, ಕೋ, ಆಗುವದುಂಟು.

122. ಇರು ಧಾತು ಅನೇಕ ಸ್ಥಳಗಳಲ್ಲಿ ವಿಕಾರವಾಗಿ ಬರುವದರಿಂದಲೂ ಅದಕ್ಕೆ ಹೆಚ್ಚಾದ ಬಳಿಕೆ ಇರುವದರಿಂದಲೂ ಅದರ ಕ್ರಿಯಾಮಾತೆ ಪೂರ್ಣವಾಗಿ ತೋರಿಸ ಬೇಕು.

ಇರು ಧಾತು.

ಅವ್ಯಯ ರೂಪಗಳು.

1. ಭಾವರೂಪ. ಇರ, ಇರಲು, ಇರಲಿಕ್ಕೆ.

ನ್ಯೂನ ರೂಪಗಳು.

	ವರ್ತ.	ಭೂತ.	ನಿಷೇಧ.
1. ಅನುಸರಣೆ ನ್ಯೂನಗಳು.	ಇರುತ್ತಾ,	ಇದ್ದು,	ಇರದೆ.
2. ವಿಶೇಷಣ ನ್ಯೂನಗಳು.	ಇರುವ,	ಇದ್ದ,	ಇರದ.

VERBS.

ಆಖ್ಯಾತ ರೂಪಗಳು.

ವರ್ತಮಾನ ಕಾಲ.

		ಏಕವಚನ.		ಬಹುವಚನ.	
		ಕ್ರಮರೂಪ.	ವಿಕಾರರೂಪ.	ಕ್ರಮರೂಪ.	ವಿಕಾರರೂಪ.
1.		ಇರುತ್ತೇನೆ	ಇದ್ದೇನೆ	ಇರುತ್ತೇವೆ.	ಇದ್ದೇವೆ
2.		ಇರುತ್ತೀ	ಇದ್ದೀ	ಇರುತ್ತೀರಿ	ಇದ್ದೀರಿ
3.	ಪು.	ಇರುತ್ತಾನೆ	ಇದ್ದಾನೆ	ಇರುತ್ತಾರೆ	ಇದ್ದಾರೆ
	ಸ್ತ್ರೀ.	ಇರುತ್ತಾಳೆ	ಇದ್ದಾಳೆ	ಇರುತ್ತಾರೆ	ಇದ್ದಾರೆ
	ನ.	ಇರುತ್ತದೆ.	ಇದೆ, ಅದೆ	ಇರುತ್ತವೆ.	ಇವೆ, ಅವೆ.

ಭೂತಕಾಲ.

1.		ಇದ್ದೆನು.	ಇದ್ದೆವು.
2.		ಇದ್ದಿ.	ಇದ್ದಿರಿ.
3.	ಪು.	ಇದ್ದನು.	ಇದ್ದರು.
	ಸ್ತ್ರೀ.	ಇದ್ದಳು.	
	ನ.	ಇತ್ತು.	ಇದ್ದವು.

VERBS.

ಭವಿಷ್ಯತ್ತು.

		ಏಕವಚನ.	ಬಹುವಚನ.
1.		ಇರುವೆನು.	ಇರುವೆವು.
2.		ಇರುವಿ.	ಇರುವಿರಿ.
3.	ಪು.	ಇರುವನು.	ಇರುವರು.
	ಸ್ತ್ರೀ.	ಇರುವಳು.	ಇರುವರು.
	ನ.	ಇರುವದು.	ಇರುವವು.

ಸಂಶಯ.

1.		ಇದ್ದೇನು.	ಇದ್ದೇವು.
2.		ಇದ್ದೀಯೆ.	ಇದ್ದೀರಿ.
3.	ಪು.	ಇದ್ದಾನು.	ಇದ್ದಾರು.
	ಸ್ತ್ರೀ.	ಇದ್ದಾಳು.	
	ನ.	ಇದ್ದೀತು.	ಇದ್ದಾವು.

ವಿಧಿ.

1.		ಇರುವೆ.	ಇರುವೆವು.
2.		ಇರು.	ಇರ್ರಿ.
3.	ಪು.	ಇರಲಿ.	ಇರಲಿ,
	ಸ್ತ್ರೀ.	ಇರಲಿ.	
	ನ.	ಇರಲಿ.	

VERBS.

ನಿಷೇಧ.

		ಏಕವಚನ.	ಬಹುವಚನ.
1.		ಇರೆನು.	ಇರೆವು.
2.		ಇರೆ.	ಇರರಿ.
3.	ಪು.	ಇರನು.	ಇರರು.
	ಸ್ತ್ರೀ.	ಇರಳು.	
	ನ.	ಇರದು.	ಇರವು.

123. ಇನ್ನು ಅನೇಕ ಧಾತುಗಳಿಗೆ ಕೆಲವು ಕಡೆಯಲ್ಲಿ ಲೋಪ ಬರುವದುಂಟು. ಹ್ಯಾಗಂದರೆ, ವರ್ತಮಾನ ಪ್ರಥಮ ಏಕವಚನದಲ್ಲಿ, ತ್ತದೆ ಎಂಬುವದಕ್ಕೆ ತ್ತೆ ಆದೇಶವಾಗುವದುಂಟು. ಉದಾ. ಬರುತ್ತದೆ, ಬರುತ್ತೆ. ಹೋಗುತ್ತದೆ, ಹೋಗುತ್ತೆ.

124. ಅನು, ಎನು ಎಂಬುವ ಪ್ರತ್ಯಯಗಳಲ್ಲಿ, ನು ಎಂಬುವ ಕಡೇ ಅಕ್ಷರ ಲೋಪವಾಗುವದುಂಟು. ಉದಾ. ನುಡಿದನು, ನುಡಿದ; ನುಡಿದೆನು, ನುಡಿದೆ.

125. ದುಪ್ರತ್ಯಯವುಳ್ಳ ನ್ಯೂನದ ಮೇಲೆ ಕೊಳ್ಳು ಧಾತು ಸೇರಿದರೆ, ದುಪ್ರತ್ಯಯ ಲೋಪವಾಗಿ, ಧಾತುವಿನ ಕಡೇ ಸ್ವರಕ್ಕೆ ಅದೇಶವಾಗುವದುಂಟು. ಉದಾ. ಬರೆದು, ಬರಕೋ. ಹಿಡಿದು, ಹಿಡುಕೋ.

126. ತೆಗೆದು ಎಂಬುವ ನ್ಯೂನಕ್ಕೆ ತ ಆದೇಶವಾಗುವದುಂಟು. ಉದಾ. ತಕ್ಕೊ.

DEFECTIVE VERBS.

ಅಪೂರ್ಣ ಕ್ರಿಯಾಪದಗಳು.

127. ಕೆಲವು ರೂಪಗಳು ಇಲ್ಲದವುಗಳು ಅಪೂರ್ಣ ಕ್ರಿಯಾಪದಗಳು. ಅವುಗಳಲ್ಲಿ ಕೆಲವುಗಳಿಗೆ ಕಾಲ ಭೇದವಿಲ್ಲ; ಕೆಲವುಗಳಿಗೆ ಕಾಲ ಪುರುಷ ಭೇದವಿಲ್ಲ; ಕೆಲವುಗಳಿಗೆ ಕಾಲ ಲಿಂಗ ಪುರುಷ ಭೇದವಿಲ್ಲ.

ಉದಾಹರಣೆ.

ಪುರುಷ.	ಲಿಂಗ.	ಏಕವಚನ.	ಬಹುವಚನ.
1.		ಆಪೆನು	ಆಪೆವು
2.		ಆಪಿ, ಆಪೆ	ಆಪಿರಿ
3.	ಪು.	ಆಪನು	ಆಪರು
	ಸ್ತ್ರೀ.	ಆಪಳು	
	ನ.	ಆಪದು	ಆಪವು
ವಿಶೇ. ನ್ಯೂನ.		ಆಪ.	
1.		ಆರೆನು.	ಆರೆವು
2.		ಆರಿ, ಆರೆ	ಆರಿರಿ
3.	ಪು.	ಆರನು	ಆರರು
	ಸ್ತ್ರೀ.	ಆರಳು	
	ನ.	ಆರದು	ಆರವು.

ಅನು. ನ್ಯೂ. ಭೂತ. ಆರದೆ. ವಿ. ನ್ಯೂ. ಭೂ. ಆರದ.

DEFECTIVE VERBS.

ಪುರುಷ. ಲಿಂಗ.	ಏಕವಚನ.	ಬಹುವಚನ.
1.	ಬಲ್ಲೆನು	ಬಲ್ಲೆವು
2.	ಬಲ್ಲಿ, ಬಲ್ಲೆ	ಬಲ್ಲಿರಿ
3. ಪು.	ಬಲ್ಲನು	ಬಲ್ಲರು
3. ಸ್ತ್ರೀ.	ಬಲ್ಲಳು	
3. ನ.	ಬಲ್ಲದು	ಬಲ್ಲವು

ವಿಶೇಷಣಾ ನ್ಯೂನ. ಬಲ್ಲ.

1.	ಒಲ್ಲೆನು	ಒಲ್ಲೆವು
2.	ಒಲ್ಲಿ, ಒಲ್ಲೆ	ಒಲ್ಲಿರಿ
3. ಪು.	ಒಲ್ಲನು	ಒಲ್ಲರು
3. ಸ್ತ್ರೀ.	ಒಲ್ಲಳು	
3. ನ.	ಒಲ್ಲದು	ಒಲ್ಲವು

ಅನುಸರಣೆ ನ್ಯೂ. ನಿಷೇ. ಒಲ್ಲದೆ.

128. ಇವು ಬೇರೆ ಕ್ರಿಯಾಪದಕ್ಕೆ ಸೇರಿದರೆ, ಅದರ ಭಾವರೂಪ ಬರ ಬೇಕು. ಉದಾ. ಮಾಡಲಾರನು; ಮಾಡ ಬಲ್ಲನು.

129. ಬೇಕು, ಬಹುದು, ಇವುಗಳಿಗೆ ಕಾಲ ಪುರುಷ ಲಿಂಗ ವಚನ ಗಳ ಭೇದವಿಲ್ಲ, ಇವು ಬೇರೆ ಧಾತುವಿನ ಭಾವರೂಪಕ್ಕೆ ಸೇರುವದುಂಟು. ಉದಾ. ಬರ ಬೇಕು; ಹೋಗ ಬಹುದು.

DEFECTIVE VERBS,

130. ಬೇಡ ಕ್ರಿಯಾಪದಕ್ಕೆ ವಚನ ಭೇದ ಮಾತ್ರ ಉಂಟು. ಉದಾ. ನೀನು ಮಾಡ ಬೇಡ, ನೀವು ಮಾಡ ಬೇಡಿ, ಮಾಡ ಬೇಡಿರಿ.

131. ಬೇಕು, ಬೇಡ, ಮತ್ತೊಂದು ಕ್ರಿಯಾಪದವಿಲ್ಲದೆ ಬೇರೆ ಶಬ್ದಗಳಿಗೆ ಶೇರುವದುಂಟು. ಉದಾ. ಅದು ನನಗೆ ಬೇಡ; ಜ್ಞಾನವೇ ಬೇಕು.

132. ಉಂಟು, ಇಲ್ಲ, ಅಹುದು, ಹೌದು, ಅಲ್ಲ, ಇವುಗಳಿಗೂ ಕಾಲ, ಪುರುಷ, ಲಿಂಗ, ವಚನಗಳ ಬೇಧವಿಲ್ಲ. ಉದಾ. ಅವನು ಇಲ್ಲ. ಅವರು ಇಲ್ಲ; ನೀನು ಅಲ್ಲ, ನಾನು ಅಲ್ಲ.

133. ಇಲ್ಲ ಎಂಬುವದು ಬೇರೆ ಧಾತುವಿನ ಭಾವರೂಪಕ್ಕೆ ಶೇರಿದರೆ, ಭೂತಕಾಲದ ನಿಷೇಧ ಅರ್ಥವನ್ನು ಹೇಳುತ್ತದೆ. ಉದಾ. ಅವನು ಬರಲಿಲ್ಲ.

134. ಅಂತೆ ಎಂಬುವದು ಬೇರೊಂದು ಕ್ರಿಯಾಪದದ ಮೇಲೆ ಶೇರಿ ಯಾರೊಬ್ಬರು ಅನ್ನುತ್ತಾರೆ ಎಂಬುವ ಅರ್ಥವನ್ನು ಹೇಳುತ್ತದೆ. ಉದಾ. ಬಂದನಂತೆ; ಹೋದನಂತೆ.

REFLEXIVE VERBS.

ಸ್ವಾರ್ಥ ಕ್ರಿಯಾಪದಗಳು

135. ತನಗೆ ತಾನೇ, ತನ್ನಿಂದ ತಾನೇ, ಯಾವದೊಂದು ಕ್ರಿಯೆಯನ್ನು ಮಾಡುವನೆಂಬ ಅರ್ಥಗಳನ್ನು ಹೇಳುವ ಕ್ರಿಯಾಪದಗಳು ಸ್ವಾರ್ಥ ಕ್ರಿಯಾಪದಗಳು.

DEFECTIVE VERBS.

136. ಭೂತ ಅನುಸರಣೆನ್ಯೂನಕ್ಕೆ ಕೊಳ್ಳು ಧಾತು ಶೇರುವದರಿಂದ ಆಗುತ್ತವೆ. ಉದಾ. ಬರೆದು ಕೊಳ್ಳುತ್ತಾನೆ. ಹಾಡಿ ಕೊಂಡು ಹೋಗುತ್ತಾನೆ.

PASSIVE VERBS.

ಕರ್ಮಣಿ ಕ್ರಿಯಾಪದಗಳು.

137. ಒಬ್ಬನಿಂದ ಯಾವದೊಂದು ಕೆಲಸವಾಗುವದೆಂಬ ಅರ್ಥವನ್ನು ಹೇಳುವದು ಕರ್ಮಣಿ ಕ್ರಿಯಾಪದವು.

138. ಅದು ಪಡು ಧಾತು ಬೇರೆ ಧಾತುವಿನ ಭಾವರೂಪಕ್ಕೆ ಶೇರುವದರಿಂದ ಆಗುತ್ತದೆ. ಉದಾ. ಬರೆಯಲ್ಪಡುತ್ತದೆ; ಕರೆಯಲ್ಪಡುತ್ತಾನೆ.

CAUSAL VERBS.

ಪ್ರೇರಣ ಕ್ರಿಯಾಪದಗಳು.

139. ಒಬ್ಬನು ಮತ್ತೊಬ್ಬನಿಂದ ಕ್ರಿಯೆ ನಡಿಸುವನೆಂಬುವ ಅರ್ಥವನ್ನು ಹೇಳುವದು ಪ್ರೇರಣಾ ಕ್ರಿಯಾಪದವು.

140. ಅದು ಇಸು ಪ್ರತ್ಯಯ ಒಂದು ಶುದ್ಧ ಧಾತುವಿನ ಮೇಲೆ ಶೇರುವದರಿಂದ ಆಗುತ್ತದೆ. ಉದಾ. ಬರಿಸು; ಕರಿಸು.

CAUSAL VERBS.

141. ಇವುಗಳಿಗೆ ಎಲ್ಲಾ ಕಡೆಯಲ್ಲೂ ಬೇರೆ ಉಕಾರಾಂತ ಧಾತು ಗಳ ಹಾಗೆ ರೂಪವಾಗುತ್ತದೆ.

142. ನಾಮಪದಗಳ ಮೇಲೆ ಇಸು ಪ್ರತ್ಯಯ ಬಂದರೆ ಪ್ರೇರಣಾರ್ಥ ವಾಗುವದಿಲ್ಲ. ಉದಾ. ಸಂತೋಷಿಸು; ದುಖಿಸು.

143. ಏಳು ಧಾತು ಪ್ರೇರಣಾರ್ಥವಾದರೆ, ಎಬ್ಬಿಸು ಆಗುತ್ತದೆ. ಆದರೆ ಏಳಿಸು ಎಂದು ಹೇಳುವದುಂಟು.

INDECLINABLE WORDS AND PARTICLES.

Adverbs, Conjunctions, Postpositions, and Interjections.

ಅವ್ಯಯಗಳನ್ನು ಕುರಿತು.

144. ಅವ್ಯಯವಂದರೆ, ಎಲ್ಲಾ ಕಡೆಯಲ್ಲೂ ಒಂದೇ ರೀತಿಯಾಗಿ ಬರುವ ಶಬ್ದವು. ಉದಾ. ಸಂಗಡ, ಸಂಗಾತ, ಒಡನೆ, ಕೂಡ, ಓಸ್ಕರ, ಬಗ್ಯೆ, ನಿಮಿತ್ತ, ಇಂತ, ಅಂತ, ತನಕ, ವರಿಗೆ, ಮಟ್ಟಿಗೆ, ಪರ್ಯಂತರ, ಸುತ್ತ, ಸುತ್ತಲು, ಸುತ್ತು, ತರುವಾಯ, ಹೊರ್ತು. ತಿರಿಗಿ, ಹಾಗೆ, ಹ್ಯಾಗೆ, ಆಗ, ಆಗಲು, ಆಗ್ಯೆ, ಈಗ, ಈಗಲು, ಈಗ್ಯೆ, ಯಾವಾಗ, ಯಾವಾಗಲು, ಯಾವಾಗ್ಯೆ, ನಿನ್ನೆ, ಮೊನ್ನೆ, ನಾಳೆ, ನಾಳಿದ್ದು,

ಬೆಳಿಗ್ಯೆ, ಹೊತಾರೆ, ಅಂತೆ, ಓಪಾದೆಯಲ್ಲಿ, ಸುಮ್ಮನೆ, ಸುಮ್ಮಗೆ, ನೆಟ್ಟನೆ, ನೆಟ್ಟಗೆ, ಮತ್ತು, ಮತ್ತೆ, ಸಹ, ಇನ್ನು, ಅಯ್ಯೋ, ಆಃ, ಛೀಃ, ಇಸ್, ಓ, ಎಲೇ.

145. ಅರ್ಥದ ಪ್ರಕಾರ ಇವುಗಳನ್ನು ವಿಭಾಗಿಸಿದರೆ, ಒಂದೊಂದು ತರಕ್ಕೆ ಒಂದೊಂದು ಹೆಸರು ಕೊಡ ಬಹುದು. ಏನಂದರೆ, ವಿಭಕ್ತ್ಯವ್ಯಯ, ಗುಣ ವಿಶೇಷಣ, ಕ್ರಿಯಾ ವಿಶೇಷಣ, ಸಮುಚ್ಚಾಯಕಾವ್ಯಯ, ಸಂಬುದ್ಧ್ಯವ್ಯಯ, ಭಾವ ಬೋಧಕಾವ್ಯಯ.

146. ವಿಭಕ್ತ್ಯವ್ಯಯ ನಾಮಪದದ ಮೇಲೆಯೂ ಸರ್ವನಾಮದ ಮೇಲೆಯೂ ಬರುವದು. ಉದಾ. ಅವನ ಸಂಗಡ, ಮನೆಯ ಮೇಲೆ.

147. ಗುಣ ವಿಶೇಷಣ ಗುಣವಾಚಕದ ಸಂಗಡ ಬಂದು, ಅದನ್ನು ಕುರಿತು ಯಾವದೊಂದು ವಿಶೇಷ ಹೇಳುವದು. ಉದಾ. ಬಹು ದೊಡ್ಡದು.

148. ಕ್ರಿಯಾವಿಶೇಷಣ ಕ್ರಿಯಾಪದದ ಸಂಗಡ ಬಂದು, ಅದನ್ನು ಕುರಿತು ಯಾವದೊಂದು ವಿಶೇಷ ಹೇಳುವದು. ಉದಾ. ಬೇಗ ಬರುತ್ತಾನೆ; ನೆಟ್ಟಗೆ ಹೋಗುತ್ತಾನೆ.

149. ಅವ್ಯಯಗಳಲ್ಲದೆ ಆಗಿ ಎಂಬ ಅನುಸರಣೆ ನ್ಯೂನವು ನಾಮ ಪದಕ್ಕಾದರೂ ಗುಣವಾಚಕಕ್ಕಾದರೂ ಶೇರುವದರಿಂದ ಕ್ರಿಯಾವಿಶೇಷಣವಾಗುವದು. ಉದಾ. ಸಂತೋಷವಾಗಿ ಕೊಟ್ಟನು; ಚನ್ನಾಗಿ ಬರೆಯುತ್ತಾನೆ.

150. ಸಮುಚ್ಚಾಯಕಾವ್ಯಯು ಶಬ್ದಗಳನ್ನಾದರೂ ವಾಕ್ಯಗಳನ್ನಾದರೂ ಕೂಡಿಸುತ್ತದೆ. ಉದಾ. ಇವನೂ ಅವನೂ ಹೋದರು; ಮತ್ತು ಇನ್ನು ಅನೇಕ ಜನರು ಹೋದರು. ಇಲ್ಲಿ ಇವನು ಅವನು ಶಬ್ದಗಳನ್ನು ಕೂಡಿಸುವದಕ್ಕೆ ಊ ಎಂಬುವದು ಬಂತು; ಎರಡು ವಾಕ್ಯಗಳನ್ನು ಕೂಡಿಸುವದಕ್ಕೆ ಮತ್ತು ಎಂಬುವದು ಬಂತು.

151. ಸಂಬುದ್ಧ್ಯವ್ಯಯು ಒಬ್ಬರನ್ನು ಕರೆಯುವದರಲ್ಲಿ ಬರುವದು. ಉದಾ. ಎಲೋ ಹುಡುಗ.

152. ಭಾವ ಬೋಧಕಾವ್ಯಯು ಸಂತೋಷ, ಆಶ್ಚರ್ಯ ಮೊದಲಾದವುಗಳನ್ನು ಹೇಳುವದು. ಉದಾ. ಅಯ್ಯೋ, ಅವನಿಗೆ ಬುದ್ಧಿ ತಪ್ಪಿತು!

153. ಇನ್ನು ಕೆಲವು ಪ್ರಶ್ನೆ, ಸಂದೇಹ, ದೃಢ ಅರ್ಥಗಳನ್ನು ಹೇಳುವ ಪ್ರತ್ಯಯಗಳು ಅವ್ಯಯಗಳಲ್ಲಿ ಸೇರುತ್ತವೆ. ಯಾವವಂದರೆ, ಏ, ಓ; ಆ, ಉದಾ. ಅದೇ ಕೆಲಸ. ಕೆಲಸವಾಯಿತೋ? ಅದು ಏನೋ? ನಾನರಿಯೆ.

154. ಅವ್ಯಯಗಳು ನಾಮವಾಚಕಗಳಿಂದಲೂ ಸರ್ವನಾಮಗಳಿಂದಲೂ ಹುಟ್ಟಿರುವವು. ಮತ್ತು ಅವುಗಳಲ್ಲಿ ಕೆಲವು ಅನೇಕ ಸಾರಿ ಅವ್ಯಯಗಳಾಗಿ ಹೇಳಲ್ಪಟ್ಟಾಗ್ಯೂ, ಒಂದೊಂದು ಸ್ಥಳದಲ್ಲಿ ವಿಭಕ್ತಿಗಳನ್ನು ಹೊಂದುತ್ತವೆ.

ಉದಾಹರಣೆ.

ಅಂದು

ತೃ. ಅಂದಿನಿಂದ
ಚ. ಅಂದಿಗೆ
ಷ. ಅಂದಿನ

ಹೀಗೆ ಇಂದು ಎಂದು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.

ಅತ್ತಲು, ಅತ್ತ

ತೃ. ಅತ್ತಲಿಂದ
ಚ. ಅತ್ತಲಿಗೆ
ಷ. ಅತ್ತಲ

ಹೀಗೆ ಇತ್ತಲು ಎತ್ತಲು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.

ಆಗಲು, ಆಗ

ತೃ. ಆಗಲಿಂದ, ಆಗಿನಿಂದ
ಷ. ಆಗಿನ

ಹೀಗೆ ಈಗಲು ಯಾವಾಗಲು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.

ನಿನ್ನೆ.

ತೃ. ನಿನ್ನೆಯಿಂದ
ಚ. ನಿನ್ನೆಗೆ
ಷ. ನಿನ್ನಿನ, ನಿನ್ನೆಯ

ಹೀಗೆ ಮೊನ್ನೆ ನಾಳೆ ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ,

ನಾಳಿದ್ದು.

ತೃ. ನಾಳಿದ್ದರಿಂದ
ಚ. ನಾಳಿದ್ದಕ್ಕೆ
ಷ. ನಾಳಿದ್ದರ

ಹೊರಗೆ.

ತೃ. ಹೊರಗಿನಿಂದ
ಷ. ಹೊರಗಿನ

ಹೀಗೆ, ಕೆಳಗೆ, ಒಳಗೆ, ಮೇಲೆ, ಹಿಂದೆ, ಮುಂದೆ, ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.

155. ಮತ್ತು ಮೇಲೆ, ಹಿಂದೆ, ಮುಂದೆ, ಎಂಬವುಗಳಿಗೆ ಚತುರ್ಥಿ ಸಹ ಬರುತ್ತದೆ. ಹ್ಯಾಗಂದರೆ, ಮೇಲಕ್ಕೆ, ಹಿಂದಕ್ಕೆ, ಮುಂದಕ್ಕೆ.

DERIVATIVES.

ವ್ಯುತ್ಪನ್ನ ಶಬ್ದಗಳು.

156. ಮೇಲೆ ವಿವರಿಸಿರುವ ಸಿದ್ಧ ಶಬ್ದಗಳಿಂದ ವುತ್ಪತ್ತಿಯಾಗುವಂಥವುಗಳೇ ವ್ಯುತ್ಪನ್ನ ಶಬ್ದಗಳು. ಅವು ಮೂರು ವಿಧ—ತದ್ಧಿತ ಪದಗಳು, ಕ್ರಿಯಾನಾಮಗಳು, ಸಮಾಸ ಪದಗಳು.

DERIVATIVE NOUNS.

ತದ್ಧಿತ ಪದಗಳು.

157. ತದ್ಧಿತ (ತತ್ಹಿತ) ಅಂದರೆ, ಆ ಶಬ್ದಕ್ಕೆ ತಕ್ಕಂಥ ಎಂಬ ಅರ್ಥ ಕೊಡುತ್ತದೆ. ಆದಕಾರಣ ತದ್ಧಿತ ಪ್ರತ್ಯಯ ಯಾವದಾದರೂ ಒಂದು ವಿಶೇಷಾರ್ಥವನ್ನು ಹೇಳುವದಕ್ಕಾಗಿ ಸಿದ್ಧ ಶಬ್ದಕ್ಕೆ ಶೇರಿಸಲ್ಪಡುವದು.

158. ಅಂಥ ಪ್ರತ್ಯಯಗಳಲ್ಲಿ ಮುಖ್ಯವಾದವುಗಳು ಯಾವವಂದರೆ, ಜಾತಿ, ಗುಣ, ಉದ್ಯೋಗ ಮೊದಲಾದ ಅರ್ಥವುಳ್ಳ ಪ್ರತ್ಯಯಗಳು. ಪುಲ್ಲಿಂಗ ಪ್ರತ್ಯಯಗಳು: ವಂತ, ಕ, ಕಾರ, ಗಾರ, ಆರ, ಇ, ಇಷ್ಟ, ಸ್ತ, ಸ್ಥ, ಇಗ, ಇಕ, ವಡಿಗ, ಆಳಿ, ಗುಳಿ.

159. ಇವು ನಾಮಪದಗಳ ಮೇಲೆಯೂ, ಗುಣವಾಚಕದ ಮೇಲೆಯೂ ಸಂಧಿಯ ನ್ಯಾಯಗಳ ಪ್ರಕಾರ ಶೇರ ಬೇಕು. ಉದಾ. ನೀತಿವಂತನು, ರಕ್ಷಕ, ಮೋಸಕಾರ, ಕುದುರೆಗಾರ, ಕುಂಬಾರ, ಪಾಪಿ, ಬಲಿಷ್ಟ, ಮಾನಸ್ತ, ಗೃಹಸ್ಥ, ಗಾಣಿಗ, ಧನಿಕ, ಹೂವಡಿಗ, ಮಾತಾಳಿ, ಸಾಲಗುಳಿ.

DERIVATIVE NOUNS.

160. ಇವುಗಳಲ್ಲಿ ಕೆಲವುಗಳಿಗೆ ಸ್ತ್ರೀ ಲಿಂಗವನ್ನು ತೋರಿಸುವದಕ್ಕೆ ಳು, ಎ, ತಿ, ಇತಿ, ಪ್ರತ್ಯಯಗಳು ಶೇರುತ್ತವೆ. ಉದಾ. ಧನವಂತಳು, ರೂಪವಂತೆ, ಕುಂಬಾರ್ತಿ, ಕುಂಬಾರಿತಿ, ಹೂವಡಿಗಿತಿ.

161. ನಪುಂಸಕ ಪ್ರತ್ಯಯಗಳು. ತ್ವ, ತನ, ಇಕೆ, ಪು. ಉದಾ. ಮನುಷ್ಯತ್ವ, ಬಡತನ, ದೊಡ್ಡಸ್ತಿಕೆ, ಬಿಳಿಪು.

VERBAL NOUNS.

ಕ್ರಿಯಾ ವಾಚಕಗಳು.

162. ಕ್ರಿಯಾವಾಚಕ ಕೃತ್ಪ್ರತ್ಯಯದಿಂದ ಹುಟ್ಟುವ ಶಬ್ದವು. ಅದು ಎಲ್ಲಾದರಲ್ಲಿ ನಾಮವಾಚಕದ ಹಾಗೆಯೇ ಇರುವದು. ಅದರ ಹಾಗೆ ವಿಭಕ್ತಿಗಳನ್ನು ಹೊಂದುವದು. ಉದಾ. ಕಟ್ಟು, ಕಟ್ಟುವದು.

163. ಅವುಗಳಿಗೆ ಕರ್ತೃ ಕರ್ಮ ಭಾವ ಅರ್ಥಗಳುಂಟು.

164. ಕರ್ತೃ ಅರ್ಥವುಳ್ಳದ್ದು ಧಾತು ಹೇಳುವ ಕ್ರಿಯೆಯನ್ನು ಮಾಡುವವನೆಂಬ ಅರ್ಥವನ್ನು ಹೇಳುವದು. ಉದಾ. ಕುಟ್ಟು, ಕುಟಿಗನು. ಮಾಡುವವನು.

165. ಕರ್ಮ ಅರ್ಥವುಳ್ಳದ್ದು, ಅದರ ಕರ್ಮವನ್ನು ಹೇಳುವದು. ಉದಾ. ಬರೆ, ಬರಹ.

VERBAL NOUNS.

166. ಭಾವಾರ್ಥವುಳ್ಳದ್ದು, ಬರೀ ಕ್ರಿಯೆಯನ್ನು ಹೇಳುವದು. ಉದಾ. ಹಾಡು, ಹಾಡುವಿಕೆ; ಹಾಡಿಕೆ.

167. ಕರ್ತೃ ಅರ್ಥವಾಗಿ ಕುಳಿ, ಇಗ, ಉಕ, ಅ, ಪುರಿಕಿ ಪ್ರತ್ಯೆಯಗಳು ಬರುತ್ತವೆ. ಉದಾ. ಆಡು, ಆಡುಕುಳಿ; ಕುಟ್ಟು, ಕುಟಿಗ; ಮುರಿ, ಮುರುಕ; ಕೆಣಕು, ಕೆಣಕ; ಅಂಜು, ಅಂಜುಪುರಿಕಿ.

168. ಮತ್ತು ವರ್ತಮಾನ ವಿಶೇಷಣ ನ್ಯೂನದ ಮೇಲೆ ಸರ್ವನಾಮ ಬರುತ್ತದೆ. ಉದಾ. ಮಾಡುವ—ಅವನು = ಮಾಡುವವನು. ಇತ್ಯಾದಿ.

169. ಹೀಗೆ ಇವು ಧಾತುಗಳ ಮೇಲೆ ಸಂಧಿಯ ನ್ಯಾಯಗಳ ಪ್ರಕಾರ ಸೇರುತ್ತವೆ. ಮತ್ತು ಒಂದು ವೇಳೆ ಧಾತುವಿಗೆ ವ್ಯಂಜನ ಲೋಪವಾಗುವದು. ಉದಾ. ಕುಟ್ಟು, ಕುಟಿಗ.

170. ಸೋಲು, ಸಾಲು, ಧಾತುಗಳಾದರೆ, ಗುಳಿಪ್ರತ್ಯಯ ಕ್ರಿಯಾನ್ಯೂನದ ಮೇಲೆ ಬರುವದು. ಸೋತುಗುಳಿ. ಸಾತುಗುಳಿ.

171. ಕರ್ಮ ಭಾವ ಅರ್ಥಗಳಾಗಿ, ಇಕೆ, ಇಗೆ. ವು, ಮೊದಲಾದವುಗಳು ಬರುತ್ತವೆ. ಉದಾ. ತೋರು, ತೋರಿಕೆ: ನೆಡು, ನೆಡಿಗೆ; ಸಾ, ಸಾವು.

172. ಕೆಲವು ಧಾತುಗಳು ಬಹಳ ವಿಕಾರವಾಗಿ ಕ್ರಿಯಾವಾಚಕಗಳಾಗುತ್ತವೆ, ಉದಾ. ಉಣ್ಣು, ಊಟ; ಆಡು, ಆಟ; ಕೊಲ್ಲು, ಕೊಲೆ.

173. ಕೆಲವು ಧಾತುಗಳು ಪ್ರತ್ಯಯಗಳನ್ನು ಹೊಂದದೆ ಕ್ರಿಯಾವಾ

ಚಕದ ಅರ್ಥ ಕೊಡುತ್ತದೆ. ಉದಾ. ಬದುಕು, ಬದುಕು; ದಾಟು. ದಾಟು.

174. ಭಾವಾರ್ಥವಾಗಿ ಎಲ್ಲಾ ಧಾತುಗಳಿಗೆ ಓಣ, ಉವಿಕೆ, ಪ್ರತ್ಯಯಗಳು ಆಗುತ್ತವೆ. ಉದಾ. ಕೊಡೋಣ; ಕೊಡುವಿಕೆ.

175. ಮತ್ತು ಅದೇ ಅರ್ಥವಾಗಿ ವಿಶೇಷಣ ನ್ಯೂನಗಳಿಗೆ ಅದು ಸರ್ವನಾಮ ಬರುತ್ತದೆ. ಉದಾ. ಮಾಡುವದು, ಮಾಡಿದ್ದು, ಪಟ್ಟದ್ದು.

COMPOUND NOUNS.

ಸಮಾಸ ಪದಗಳು.

176. ಸಮಾಸಪದವಂದರೆ, ಎರಡು ಶಬ್ದಗಳು ಒಂದು ಪದವಾಗಿ ಒಂದೇ ಅರ್ಥವನ್ನು ಹೇಳುವದು. ಉದಾ. ಕೈ ಕೆಲಸ.

177. ಮೊದಲಲ್ಲಿ ಬರುವ ಪದಕ್ಕೆ ಪೂರ್ವಪದವೆಂದೂ ಅದರ ಮೇಲೆ ಬರುವ ಪದಕ್ಕೆ ಪರ ಪದವೆಂದೂ ಹೆಸರು.

178 ತದ್ಭವ, ದೇಶ್ಯ, ಅನ್ಯದೇಶ್ಯ ಶಬ್ದಗಳಿಗೆ ಸಮಾಸವಾಗುತ್ತದೆ. ಉದಾ. ಸೂಜಿ ಮೊನೆ, ಗೋಧಿ ಹಿಟ್ಟು, ಇಟಿಕೆ ಗೋಡೆ, ಹಕ್ಕಿ ಗೂಡು, ಕುದುರೆ ಲಾಯ.

179. ಎರಡು ತತ್ಸಮ ಶಬ್ದಗಳು ಸಮಾಸವಾಗ ಬಹುದು. ಉದಾ. ಆತ್ಮರೂಪ; ದೇವದೂತ.

180. ಒಂದು ತತ್ಸಮವೂ ಒಂದು ದೇಶ್ಯವೂ ಬಹಳ ಸಾರಿ ಸಮಾಸವಾಗುವದಿಲ್ಲ. ಉದಾ. ಮನೇಕೃತ್ಯ. ಇದಕ್ಕೆ ಮನೇ ಕೆಲಸವೆಂದಾದರೂ, ಗೃಹಕೃತ್ಯವೆಂದಾದರೂ, ಹೇಳ ಬಹುದು. ಮನೇ ಕೆಲಸ ಅಂದರೆ, ಎರಡು ದೇಶ್ಯವಾಯಿತು. ಗೃಹಕೃತ್ಯ ಅಂದರೆ ಎರಡು ತತ್ಸಮವಾಯಿತು.

181. ಪೂರ್ವಪದ ಇ, ಎಕಾರಾಂತವಾದರೆ, ಅದಕ್ಕೆ ದೀರ್ಘವಾಗುವದುಂಟು. ಉದಾ. ಬೆಳ್ಳೀಬಳೆಯು; ಬಾಳೇಹಣ್ಣು.

182. ಅನೇಕ ನಾಮಪದಗಳು ಬರುವಾಗ್ಯೆ, ಅವುಗಳ ಕಡೆಯಲ್ಲಿ ಏಕವಚನ ಪ್ರತ್ಯಯವಾಗಲಿ, ಬಹುವಚನ ಪ್ರತ್ಯಯವಾಗಲಿ ಬಂದರೆ, ಅದಕ್ಕೆ ದ್ವಂದ್ವಸಮಾಸವೆಂಬ ಹೆಸರು. ಉದಾ. ಮನೆ ಮನೆಗೆ; ತಂದೆ ತಾಯಿಗಳು; ಅಣ್ಣ ತಮ್ಮಂದಿರು.

SYNTAX.

ಪ್ರಯೋಗವನ್ನು ಕುರಿತು.

183. ಮೇಲೆ ಹೇಳಿರುವ ಶಬ್ದಗಳನ್ನು ಬಳಿಸುವ ರೀತಿ ಚನ್ನಾಗಿ ತಿಳುಕೊಳ್ಳುವ ಹಾಗೆ, ವಾಕ್ಯಗಳನ್ನು ಕುರಿತು ಕೆಲ ನ್ಯಾಯಗಳನ್ನು ಗ್ರಹಿಸ ಬೇಕು.

SENTENCES.

ವಾಕ್ಯದ ವಿವರ.

184. ಪೂರ್ಣ ಅರ್ಥ ಹೇಳುವ ಪ್ರತಿವಾಕ್ಯದಲ್ಲಿ ಆಖ್ಯೆಯೂ ಆಖ್ಯಾತವೂ ಉಂಟು.

SYNTAX—SUBJECT AND PREDICATE.

185. ಮುಖ್ಯವಾಗಿ ಹೇಳಲ್ಪಡುವ ಮಾತು, ನಾಮಪದವಾಗಲಿ, ಸರ್ವನಾಮವಾಗಲಿ, ಅದೇ ಆಖ್ಯೆ. ಆಖ್ಯೆಯ ವಿಷಯವಾಗಿ ಹೇಳಲ್ಪಡುವ ಮಾತು ಆಖ್ಯಾತ. ಉದಾ. ಮನುಷ್ಯರು ಮಾತಾಡುತ್ತಾರೆ. ಇದರಲ್ಲಿ ಮನುಷ್ಯರು ಎಂಬ ಶಬ್ದವೇ ಆಖ್ಯೆ. ಮಾತಾಡುತ್ತಾರೆ ಎಂಬುವದು ಆಖ್ಯಾತ. ಯಾಕಂದರೆ, ಮನುಷ್ಯರೆಂಬ ಮಾತು ಮುಖ್ಯಾರ್ಥವಾದದ್ದು; ಮಾತಾಡುತ್ತಾರೆಂಬದು ಅದಕ್ಕೆ ಒಂದು ವಿಶೇಷ ಹೇಳುತ್ತದೆ.

186. ಹಾಗೆಯೇ, ನಾನು ಪಾಪಿ; ನೀನು ಸತ್ಯವಂತನು; ಆತನು ಶ್ರೇಷ್ಠನು; ಅವರು ದೊಡ್ಡವರು, ಎಂಬ ವಾಕ್ಯಗಳಲ್ಲಿ, ನಾನು, ನೀನು, ಆತನು, ಅವರು, ಆಖ್ಯಾಪದಗಳು. ಪಾಪಿ, ಸತ್ಯವಂತನು, ಶ್ರೇಷ್ಠನು, ದೊಡ್ಡವರು, ಆಖ್ಯಾತ ಪದಗಳು.

187. ನೀನು ಸತ್ಯವಂತನು ಎಂಬ ವಾಕ್ಯ ಕ್ರಿಯಾಪದವಿಲ್ಲದೆ, ಅರ್ಥ ಕೊಡುತ್ತದೆ; ಆದರೆ ಅದರಲ್ಲಿ ಕ್ರಿಯಾಪದ ಶೇರದೆ ಇದ್ದರೂ, ಆಖ್ಯಾತಕ್ಕೆ ಶೇರ ತಕ್ಕ ಕ್ರಿಯಾಪದ ತಿಳು ಕೊಳ್ಳಬೇಕು. ಯಾಕಂದರೆ, ನೀನು ಸತ್ಯವಂತನು = ನೀನು ಸತ್ಯವಂತನಾಗಿದ್ದೀ ಎಂಬುವ ಎರಡು ಒಂದೇ ಅರ್ಥ. ಹೀಗೆ ಅಂಥ ವಾಕ್ಯಗಳಲ್ಲಿ ಆಗಿರು ಎಂಬ ಕ್ರಿಯಾಪದವಿಲ್ಲದೆ, ಆಖ್ಯಾತ ಪದ ಬರುವದು ಬಹಳ ಬಳಿಕೆ. ಇದು ಅಡಕವಾಗುವದಕ್ಕೋಸ್ಕರವೇ.

188. ಮೇಲೆ ಇರುವ ಉದಾಹರಣೆಗಳ ಪ್ರಕಾರ ಆಖ್ಯೆ ಒಂದೇ ಮಾತಾಗಿರ ಬಹುದು, ಆಖ್ಯಾತ ಒಂದೇ ಮಾತಾಗಿರ ಬಹುದು. ಆದರೆ ಆಖ್ಯೆಗಾಗಲಿ ಆಖ್ಯಾತಕ್ಕಾಗಲಿ ಅನೇಕ ಶಬ್ದಗಳು ಶೇರ ಬಹುದು. ಉದಾ.

ಆಖ್ಯೆ.	ಆಖ್ಯಾತ.
ಆ ಮನೆಯಲ್ಲಿ ಇರುವ ಜನರು	ಬಹು ಸತ್ಯವಂತರಾಗಿದ್ದಾರೆ.
ಈ ಹುಡುಗ	ಆ ಹುಡುಗನನ್ನು ಹೊಡೆದನು.
ನಿನ್ನೆ ದಿವಸ ಬಂದ ಹುಡುಗ	ಈ ಹೊತ್ತು ತಿರಿಗಿ ಬಂದಿದ್ದಾನೆ.
ಅನೇಕ ಜನರು	ಪಾಪ ಮಾಡುವದರಲ್ಲಿ ಸಂತೋಷ ಪಡುತ್ತಾರೆ.
ಪಾಪ ಮಾಡುವದು	ಬಹಳ ಕೆಟ್ಟದ್ದು.
ಪಾಠ ಕಲಿಯ ತಕ್ಕ ಕಾಲದಲ್ಲಿ ಸುಮ್ಮನೆ ಆಡುವದು	ಹುಡುಗರಿಗೆ ಧರ್ಮವಲ್ಲ.

189. ಹೀಗೆ ಆಖ್ಯೆಯಲ್ಲಿ ಆಗಲಿ, ಆಖ್ಯಾತದಲ್ಲಿ ಆಗಲಿ, ಇರುವ ಮುಖ್ಯವಾದ ಶಬ್ದಕ್ಕೆ ಶೇರಿ ಅರ್ಥ ಪೂರೈಸುವ ಬೇರೆ ಶಬ್ದಕ್ಕೆ ಸಮಾಪಕವೆಂ

ದು ಹೇಳಲ್ಪಡುವದು. ಉದಾ. ನಿನ್ನೆ ದಿವಸ ಬಂದ ಹುಡುಗ ಈ ಹೊತ್ತು ತಿರಿಗಿ ಬಂದಿದ್ದಾನೆ ಎಂಬುವ ವಾಕ್ಯದಲ್ಲಿ, ಹುಡುಗ ಬಂದಿದ್ದಾನೆಂಬ ಶಬ್ದಗಳು ಮುಖ್ಯ. ಆದರೆ ಆಖ್ಯೆಯಲ್ಲಿ ಬೇಕಾದ ಅರ್ಥ ಹೇಳುವದಕ್ಕೆ ಮೂರು ಸಮಾಪಕವಾದ ಪದಗಳು ಬೇಕು: ನಿನ್ನೆ ದಿವಸ ಬಂದ—ಎಂಬವುಗಳು. ಹಾಗೆಯೇ ಆಖ್ಯಾತದಲ್ಲಿ ಬಂದಿದ್ದಾನೆ ಎಂಬ ಶಬ್ದಕ್ಕೆ ಈ ಹೊತ್ತು, ತಿರಿಗಿ—ಎಂಬವುಗಳು ಶೇರಿಸಲ್ಪಟ್ಟವು.

190. ವಾಕ್ಯಗಳಲ್ಲಿ ಬರುವ ಶಬ್ದಗಳನ್ನು ಶೋಧಿಸಿ ನೋಡಿದರೆ, ನಾಮಪದಗಳೂ, ಕ್ರಿಯಾಪದಗಳೂ ಬಹು ಮುಖ್ಯವಾಗಿವೆ. ಅರ್ಥ ತೋರುವದಕ್ಕೆ, ನಾಮಪದವಾಗಲಿ, ಇಲ್ಲವೆ ಅದಕ್ಕೆ ಸಮಾನವಾಗಿರುವ ಬೇರೊಂದು ಮಾತಾಗಲಿ, ಅಗತ್ಯ ಬೇಕು. ಅದೇ ಪ್ರಕಾರ ಕ್ರಿಯಾಪದ ಎಲ್ಲಾ ವಾಕ್ಯಗಳಲ್ಲಿ ತೋರದೆ ಇದ್ದರೂ, ಪ್ರತಿ ವಾಕ್ಯದಲ್ಲಿ ಯಾವದೊಂದು ಕ್ರಿಯಾಪದ ಹೇಳಿರ ಬೇಕು, ಇಲ್ಲವೆ ತಿಳಿದಿರ ಬೇಕು

191. ಇವುಗಳಿಗೆ ಬೇರೆ ಶಬ್ದಗಳು ವಿಶೇಷಣಗಳಾಗಿ ಬರುತ್ತವೆ. ಮುಖ್ಯವಾಗಿ ಗುಣವಾಚಕಗಳು ನಾಮಪದಗಳಿಗೆ ವಿಶೇಷಣಗಳಾಗಿಯೂ, ಅವ್ಯಯಗಳು ಕ್ರಿಯಾ ವಿಶೇಷಣಗಳಾಗಿಯೂ, ಇನ್ನು ಕೆಲವು ಪ್ರಕಾರವಾಗಿಯೂ ಬರುತ್ತವೆ.

192. ಗುಣವಾಚಕ ಎರಡು ಪ್ರಕಾರ ನಾಮಪದಕ್ಕೆ ವಿಶೇಷಣವಾಗಿ ಬರುತ್ತದೆ. ಅದಕ್ಕೆ ಮುಂದಾಗಿ ಬಂದರೆ, ಪೂರ್ವ ವಿಶೇಷಣವೆಂದೂ, ಅದರ ಮೇಲೆ ಬಂದು ಅದಕ್ಕೆ ಆಖ್ಯಾತ ಪದವಾದರೆ, ಉತ್ತರ ವಿಶೇಷಣವೆಂದೂ ಹೇಳಲ್ಪಡುವದು.

SYNTAX OF NOUNS.

193. ಕೆಲ ವಾಕ್ಯಗಳಲ್ಲಿ ಕ್ರಿಯಾಪದ ಮಾತ್ರ ಆಖ್ಯಾತವಾಗಿದೆ. ಉದಾ. ದೇವರು ಇದ್ದಾನೆ. ನಾನು ಬರೆಯುತ್ತೇನೆ. ಆಕೆ ಓದುತ್ತಾಳೆ. ಇತ್ಯಾದಿ.

194. ಕೆಲ ವಾಕ್ಯಗಳಲ್ಲಿ ನಾಮಪದವು ಕ್ರಿಯಾಪದವು ಎರಡೂ ಆಖ್ಯಾತವಾಗಿವೆ. ಉದಾ. ದೇವರು ಲೋಕವನ್ನು ಆಳುತ್ತಾನೆ. ಆಕೆ ಪುಸ್ತಕವನ್ನು ಓದುತ್ತಾಳೆ. ನಾನು ಕಾಗದವನ್ನು ಬರೆಯುತ್ತೇನೆ.

NOUNS.

ನಾಮಪದಗಳ ಪ್ರಯೋಗ.

ಪ್ರಥಮ ವಿಭಕ್ತಿ.

195. ಎಲ್ಲಾ ವಾಕ್ಯಗಳಲ್ಲಿ ಆಖ್ಯಾಪದಕ್ಕೆ ಪ್ರಥಮೆ ಬರುತ್ತದೆ. ಆದರೆ ಕರ್ತರಿ ಪ್ರಯೋಗದಲ್ಲಿ ಕರ್ತೃ ಆಖ್ಯಾಪದವಾಗಿದೆ; ಕರ್ಮಣಿ ಪ್ರಯೋಗದಲ್ಲಿ ಕರ್ಮ ಆಖ್ಯಾಪದವಾಗಿದೆ. ಉದಾ. ರಾಮನು ವೀರನನ್ನು ಹೊಡೆದನು; ಇದು ಕರ್ತರಿ ಪ್ರಯೋಗ. ರಾಮನು ಹೊಡೆಯಲ್ಪಟ್ಟನು; ಇದು ಕರ್ಮಣಿ ಪ್ರಯೋಗ. ಈ ಎರಡು ವಾಕ್ಯಗಳಲ್ಲಿ ರಾಮನು ಎಂಬ ಶಬ್ದವೇ ಆಖ್ಯಾ ಪದವು. ಆದರೆ ಮೊದಲನೇದರಲ್ಲಿ ಅದು ಕ್ರಿಯಾಪದಕ್ಕೆ ಕರ್ತೃ; ಎರಡನೇದರಲ್ಲಿ ಕ್ರಿಯಾಪದಕ್ಕೆ ಕರ್ಮ. ಹಾಗೆಯೇ ಕುದುರೆ ಹುಲ್ಲು ತಿನ್ನುತ್ತದೆ ಎತ್ತು ಸಾಮಾನು ಹೊರುತ್ತದೆ. ವಿಗ್ರಹಗಳು ಅಕ್ಕಸಾಲೆಯರಿಂದ ಮಾಡಲ್ಪಡುತ್ತವೆ. ಇತ್ಯಾದಿ.

SYNTAX OF NOUNS.

196. ಗುಣವಾಚಕವಾಗಲಿ, ನಾಮಪದವಾಗಲಿ, ಆಖ್ಯಾತಗಳಲ್ಲಿ ಆಖ್ಯಾ ಪದಕ್ಕೆ ಉತ್ತರ ವಿಶೇಷಣವಾಗಿ ಬಂದರೆ, ಅದಕ್ಕೆ ಪ್ರಥಮೆ ಬರುತ್ತದೆ. ಉದಾ. ಚಿಕ್ಕವರು ವಿಧೇಯರಾಗಿರ ಬೇಕು. ಒಳ್ಳೇ ಮಕ್ಕಳು ತಂದೆ ತಾಯಿಗಳಿಗೆ ಪ್ರಿಯರಾಗಿದ್ದಾರೆ. ಮನುಷ್ಯರು ಬಲಹೀನರು. ದೇವರು ಅಚಂಚಲನು.

197. ಮತ್ತು ಹೀಗೆ ಉತ್ತರ ವಿಶೇಷಣಗಳಾಗಿ ಪ್ರಯೋಗಿಸುವ ಎಲ್ಲಾ ಗುಣವಾಚಕಗಳು ನಾಮಪದಗಳಿಗೆ ಸಮಾನವಾಗಿವೆ.

198. ಕೆಲವು ಸ್ಥಳಗಳಲ್ಲಿ ಪ್ರಥಮೆಗೆ ಬದಲಾಗಿ ಪ್ರಕೃತಿ ಬರುತ್ತದೆ. ಉದಾ. ಒಬ್ಬ ಹುಡುಗ ಬಂದನು, ಮನೆ ಕಟ್ಟಲ್ಪಟ್ಟಿತು.

ಸಂಬೋಧನೆ.

199. ಸಮೀಪದಲ್ಲಿರುವ ಯಾರನ್ನಾದರೂ ಕರೆಯುವಾಗಲೂ, ಅವರ ಸಂಗಡ ಮಾತನಾಡುವಾಗಲೂ ಸಂಬೋಧನೆ ಬರುತ್ತದೆ. ಉದಾ. ಅಣ್ಣಾ ಬಾ; ಹುಡುಗನೇ ಬುದ್ಧಿಯನ್ನು ಕೇಳು.

ದ್ವಿತೀಯೆ.

200. ಎಲ್ಲಾ ಸಕರ್ಮಕ ಧಾತುಗಳ ಮುಂದೆ ಬರುವ ಕರ್ಮವನ್ನು ಹೇಳುವದಕ್ಕೆ ದ್ವಿತೀಯೆ ಬರುತ್ತದೆ. ಉದಾ. ಅವನು ಪಾಠವನ್ನು ಓದುತ್ತಾನೆ; ಕೆಲಸವನ್ನು ಮಾಡಿದನು.

201. ಕೆಲವು ಕ್ರಿಯಾಪದಗಳಿಗೆ ಅಪರೂಪವಾಗಿ ಎರಡು ಕರ್ಮ ಬರುವದು. ಉದಾ. ಅವನು ಉಪಾಧ್ಯನನ್ನು ಪುಸ್ತಕವನ್ನು ಬೇಡಿದನು; ಇವನು ವರ್ತಕನನ್ನು ಹಣವ ಕೇಳಿದನು.

202. ದ್ವಿತಿಯ್ಯೆಗೆ ಪ್ರತಿಯಾಗಿ ಪ್ರಕೃತಿ ಬರುವದುಂಟು. ಉದಾ. ಬೀಜ ಹಾಕಿದನು. ಪಾಪ ಮಾಡಿದನು.

ತೃತಿಯ್ಯೆ.

203. (1) ಕರ್ಮಣಿಕ್ರಿಯಾಪದ ಬಂದರೆ, ಅದರ ಕರ್ತೃವನ್ನು ಹೇಳುವದಕ್ಕೂ, (2) ಒಂದು ಕಾರ್ಯಕ್ಕೆ ಕಾರಣವನ್ನು ಹೇಳುವಾಗಲೂ, (3) ಸ್ಥಾನವನ್ನು ಬಿಡುವ ಅರ್ಥವನ್ನು ಹೇಳುವಾಗಲೂ, (4) ರೀತಿಯನ್ನು ಹೇಳುವಾಗಲೂ, ತೃತಿಯ್ಯೆ ಬರುತ್ತದೆ. ಉದಾ.

1. ನಾನು ಯಜಮಾನನಿಂದ ಕರೆಯಲ್ಪಟ್ಟೆನು. ಒಬ್ಬ ಹುಡುಗ ಮತ್ತೊಬ್ಬನಿಂದ ಹೊಡೆಯಲ್ಪಟ್ಟನು.

2. ಪಾಪದಿಂದ ಮರಣ ಉಂಟಾಯಿತು. ಅವನಿಂದ ವಿಚಾರಣೆ ಆಯಿತು. ಬುದ್ಧಿಯಿಂದ ಪ್ರಯೋಜನ ಉಂಟಾಗುತ್ತದೆ.

3. ಮನೆಯಿಂದ ಹೊರಟನು. ಮರದಿಂದ ಹಣ್ಣು ಬಿತ್ತು. ಭಾವಿಯಿಂದ ಮಣ್ಣು ತೆಗೆದನು.

4. ಜಾಗ್ರತೆಯಿಂದ ಬಂದನು.

SYNTAX OF NOUNS.

ಚತುರ್ಥಿ.

204. ಚತುರ್ಥಿ ಬರ ತಕ್ಕ ಸ್ಥಳಗಳು ಯಾವವಂದರೆ, (1) ಕೊಡುವದೂ, (2) ತಿಳಿಸುವದೂ, (3) ನಿರೂಪಿಸುವದೂ, ಎಂಬ ಅರ್ಥವುಳ್ಳ ಧಾತುಗಳು ಬರುವಾಗಲೂ, (4) ಒಂದು ಕ್ರಿಯೆಯ ಪ್ರಯೋಜನವನ್ನೂ, (5) ಯಾವದೊಂದರ ಭಾವವನ್ನೂ, (6) ಇಬ್ಬರಿಗೆ ಆಗಿರುವ ಸಮ್ಬಂಧವನ್ನೂ, (7) ಕಾಲದ ನಿಷ್ಕರ್ಷೆಯನ್ನೂ, (8) ಎರಡು ಸ್ಥಲಗಳಿಗೆ ಆಗಿರುವ ದೂರವನ್ನೂ, (9) ಹೆಚ್ಚು ಕಡಿಮೆಯನ್ನೂ, (10) ಉಂಟು, ಇರು, ಇಲ್ಲ ಎಂಬ ಕ್ರಿಯಾ ಪದಗಳೊಂದಿಗೆ ಸ್ವತಂತ್ರವನ್ನೂ ಹೇಳುವದಕ್ಕೂ ಚತುರ್ಥಿ ಬರುತ್ತದೆ. ಉದಾ.

1. ತಂದೆ ಮಗನಿಗೆ ಪುಸ್ತಕವನ್ನು ಕೊಟ್ಟನು.
2. ಅವನಿಗೆ ಅನೇಕ ಕಾರ್ಯಗಳನ್ನು ಕಲಿಸಿದನು.
3. ಮನೆಗೆ ಹೋಗುತ್ತೇನೆ.
4. ಹಣ್ಣಿಗೆ ಹೋದನು.
5. ಆನೆಗೆ ಸಿಂಹವು ವೈರಿ.
6. ಅವನು ನನಗೆ ಭಾವಮೈದುನ.
7. ರಾತ್ರಿಗೆ ಬರ ಬೇಕು.
8. ಮೈಸೂರಿಗೂ ಶ್ರೀರಂಗಪಟ್ಣಕ್ಕೂ ಮೂರು ಹರದಾರಿ.
9. ಅವನಿಗೆ ಇವನೇ ದೊಡ್ಡವನು.
10. ನನಗೆ ಕುದುರೆ ಉಂಟು; ಆತನಿಗೆ ಇಲ್ಲ. ಬೊಂಬೆಗೆ ರೂಪ ಇದೆ; ಆದರೆ ಅದಕ್ಕೆ ಪ್ರಾಣವಿಲ್ಲ.

ಚತುರ್ಥಿ ಇನ್ನೂ ಯಾವ ಸ್ಥಳಗಳಲ್ಲಿ ಬರ ತಕ್ಕದ್ದೋ, ಪ್ರಯೋಗದಿಂದ ತಿಳಿದು ಕೊಳ್ಳ ಬೇಕು.

ಪಂಚಮಿ.

205. ತೃತೀಯೆ ಯಾವ ಸ್ಥಳಗಳಲ್ಲಿ ಬರುತ್ತದೋ, ಅದೇ ಸ್ಥಳಗಳಲ್ಲಿ ಪಂಚಮಿ ಬರ ಬಹುದು. ಉದಾ. ಮರದದೆಸೆಯಿಂದ ಹಣ್ಣು ಬಿತ್ತು. ಊರಿನದೆಸೆಯಿಂದ ಬಂದನು. ಪಾಪದದೆಸೆಯಿಂದ ಮರಣ ಉಂಟಾಯಿತು. ಆದರೆ ಈ ಪ್ರಯೋಗ ಅಪರೂಪವಾದದ್ದು.

ಷಷ್ಟಿ.

206. ಸ್ವತಂತ್ರವನ್ನು ಹೇಳುವಾಗಲೂ, ಒಂದರಲ್ಲೊಂದು, ಒಂದಕ್ಕೊಂದು ಉಂಟಾಗಿರುವ ಅರ್ಥವನ್ನು ಹೇಳುವಾಗಲೂ, ಷಷ್ಟಿ ಬರುತ್ತದೆ. ಉದಾ. ತಂದೆಯ ಮನೆ. ಮರದ ಕೊಂಬೆ. ಮನುಷ್ಯನ ಗುಣ. ಕುದುರೆಯ ನಡಿಗೆ.

ಸಪ್ತಮಿ.

207. (1.) ಯಾವದೊಂದು ಇರುವ ಸ್ಥಳವನ್ನಾದರೂ, (2.) ಬೀಳುವ ಸ್ಥಳವನ್ನಾದರೂ, (3.) ಗುಂಪಿನಿಂದ ಒಂದನ್ನು ತೆಗೆದು ಅದನ್ನು ಹೇಳುವಾಗಲೂ, (4.) ಶ್ರೇಷ್ಠತ್ವವನ್ನೂ, (5.) ಕೆಲವು ಸ್ಥಳಗಳಲ್ಲಿ ಕಾರಣವನ್ನೂ, (6.) ಕಾಲವನ್ನೂ, ಹೇಳುವಾಗಲೂ ಸಪ್ತಮಿ ಬರುತ್ತದೆ. ಉದಾ.

SYNTAX—OF NUMBER AND GENDER OF NOUNS.

1. ಮನೆಯಲ್ಲಿ ಇದ್ದಾನೆ. 2. ಭಾವಿಯಲ್ಲಿ ಮಣ್ಣು ಬಿತ್ತು. 3. ಹುಡುಗರಲ್ಲಿ ಇವನು ಬುದ್ಧಿವಂತನು. 4. ಅವನು ವಿದ್ಯೆಯಲ್ಲಿ ಶ್ರೇಷ್ಠನು. 5. ಒಳ್ಳೇ ಕಾಗದದಲ್ಲಿ ಬರೆದದರಿಂದ ಚನ್ನಾಗಿ ಕಾಣಿಸುತ್ತದೆ. 6. ಅಂತ್ಯದಿನದಲ್ಲಿ ದೇವರು ಎಲ್ಲರಿಗೆ ನ್ಯಾಯ ತೀರಿಸುವನು.

208. ಕೆಲವು ಸ್ಥಳಗಳಲ್ಲಿ ಸಪ್ತಮಿಗೆ ಇಂದ ಎಂಬ ಪ್ರತ್ಯಯ ಸೇರಿಸಲ್ಪಡುತ್ತದೆ. ಉದಾ. ಅವನು ಮನೆಯಲ್ಲಿಂದ ಬಂದನು. ಪೆಟ್ಟಿಗೆಯಲ್ಲಿಂದ ಹಣವನ್ನು ತೆಗೆದು ಕೊಟ್ಟನು.

NUMBER AND GENDER OF NOUNS.

ಏಕವಚನ ಬಹುವಚನಗಳೂ, ಲಿಂಗವೂ.

209. ಸಮೂಹಾರ್ಥವುಳ್ಳ ನಾಮಪದಗಳು ಕೆಲವು ಉಂಟು. ಅವು ಏಕವಚನದಲ್ಲಿ ಬಂದರೂ, ಬಹುವಚನದ ಅರ್ಥ ತೋರುತ್ತದೆ. ಉದಾ. ದನಗಳು ಬಂದವು ಎಂಬುವದಕ್ಕೆ ದನ ಬಂತೆಂದೂ, ಧಾನ್ಯಗಳು ಹೆಚ್ಚಿದವು ಎಂಬುವದಕ್ಕೆ ಧಾನ್ಯ ಹೆಚ್ಚಿತೆಂದೂ ಹೇಳ ಬಹುದು.

210. ಲೆಖ್ಖದ ಶಬ್ದಗಳ ಮೇಲೆ ಬರುವ ಶಬ್ದಗಳು ಏಕವಚನದಲ್ಲಾದರೂ ಬಹುವಚನದಲ್ಲಾದರೂ ಬರ ಬಹುದು. ಉದಾ. ನಾಲ್ಕು ದಿಕ್ಕು, ನಾಲ್ಕು ದಿಕ್ಕುಗಳು. ಐದು ವರುಷ, ಐದು ವರುಷಗಳು.

SYNTAX—*of Pronouns.*

211. ಮರ್ಯಾದೆ ತೋರುವಾಗ, ಏಕವಚನಕ್ಕೆ ಪ್ರತಿಯಾಗಿ ಬಹು ವಚನ ಬರುತ್ತದೆ. ಉದಾ. ಇವರು ಬಹಳ ವಿದ್ವಾಂಸರು.

212. ಆಖ್ಯಾಪದವೂ, ಆಖ್ಯಾತಪದವೂ, ಲಿಂಗದಲ್ಲಿಯೂ, ವಚನದಲ್ಲಿಯೂ ಸಮಾನವಾಗಿರ ಬೇಕು. ಉದಾ. ಅವನು ದೊಡ್ಡವನು. ಅವನು ಬಡಿಗೆಯುವನು. ಅವಳು ಶ್ರೇಷ್ಠಳು. ಅವಳು ಕುಂಬಾರ್ತಿ. ಅದು ಡೊಂಕು. ಅದು ಕಟ್ಟಿಗೆ.

OF PRONOUNS.

ಸರ್ವನಾಮಗಳನ್ನು ಕುರಿತು.

213. ಸ್ವಲ್ಪ ಮರ್ಯಾದೆ ತೋರುವಾಗ, ನೀನು ಎಂಬ ಶಬ್ದಕ್ಕೆ ಪ್ರತಿಯಾಗಿ ನೀವು ಎಂಬ ಶಬ್ದವನ್ನು ಹೇಳ ಬಹುದು. ಆದರೆ ದೇವರನ್ನು ಕುರಿತು ಯಾವಾಗಲೂ ಏಕವಚನವನ್ನೇ ಹೇಳ ತಕ್ಕದ್ದು.

214. ಆತ್ಮಾರ್ಥಕವಾದ ತಾನು ಎಂಬ ಸರ್ವನಾಮ ಅದರ ಹಿಂದೆ ಬರುವ ಶಬ್ದಕ್ಕೆ ಸಮ್ಬಂಧವಾಗಿರುವದು. ಅದಕ್ಕೆ ಲಿಂಗ ಭೇದವಿಲ್ಲ. ಉದಾ. ಅವನು ತನ್ನ ಪಾಠವನ್ನು ಕಲಿತು ಕೊಳ್ಳುತ್ತಾನೆ. ಅವಳು ತನ್ನ ದುರ್ಗುಣವನ್ನು ಬಿಟ್ಟು ಒಳ್ಳೆಯವಳಾದಳು. ಪಕ್ಷಿ ತನಗೆ ತಾನೇ ಗೂಡು ಕಟ್ಟಿ ಕೊಳ್ಳುತ್ತದೆ. ಅವರು ತಮ್ಮ ಮನೆಗೆ ಹೋದರು.

215. ಬಹಳ ಮರ್ಯಾದೆ ತೋರುವಾಗ, ಇದು ಮಧ್ಯಮ ಪುರುಷ ಬಹುವಚನದಲ್ಲಿ ಹೇಳಲ್ಪಡುವದು. ಉದಾ. ತಾವು ನನ್ನ ಮೇಲೆ ಕಟಾಕ್ಷವಿಟ್ಟು ರಕ್ಷಿಸ ಬೇಕು. ತಮ್ಮನ್ನು ಆಶ್ರೈಸಿ ಕೊಂಡು ಇದ್ದೇನೆ.

216. ಅದೇ ಪ್ರಕಾರ ಏಕವಚನಕ್ಕೆ ಅವರು ಶಬ್ದವೂ ಒಬ್ಬರು ಶಬ್ದವೂ ಬರ ಬಹುದು. ಉದಾ. ಇವರು ನಮ್ಮ ತಂದೆಯವರು. ನೀವು ಒಬ್ಬರೇ ಬಂದಿದ್ದೀರೋ?

217. ಸ್ವಲ್ಪ ಮರ್ಯಾದೆ ತೋರುವಾಗ, ಅವನು, ಇವನು, ಅವಳು, ಇವಳು, ಎಂಬ ಶಬ್ದಗಳಿಗೆ ಕ್ರಮವಾಗಿ ಆತ, ಈತ, ಆಕೆ, ಈಕೆ, ಶಬ್ದಗಳು ಬರುತ್ತವೆ. ಉದಾ. ಆತನು ಸತ್ಯವಂತನು. ಈತನು ನನ್ನ ಸ್ನೇಹಿತನು. ಆಕೆ ಒಳ್ಳೆಯವಳು. ಈಕೆ ಮುಂಚಿತಾಗಿ ಬಂದಿದ್ದಳು.

218. ಯಾವ ಶಬ್ದದ ಬಹುವಚನದ ರೂಪ, ಮರ್ಯಾದೆ ತೋರದೆ ಇದ್ದರೂ, ಏಕವಚನಕ್ಕೆ ಬರುವದು. ಉದಾ. ಅವನ್ಯಾರು? ನೀನು ಯಾರು?

219. ಆದರೆ ಏಕವಚನವಾದ ಕ್ರಿಯಾಪದದ ಸಂಗಡ ಬಹುವಚನವಾಗಿ ಸೇರುವದಿಲ್ಲ. ಉದಾ. ಯಾರು ಇದ್ದಾನೆ? ಇದಕ್ಕೆ ಯಾವನು ಇದ್ದಾನೆ? ಇಲ್ಲವೆ, ಯಾರು ಇದ್ದಾರೆ? ಎಂದು ಹೇಳ ತಕ್ಕದ್ದು.

OF VERBS.

ಕ್ರಿಯಾಪದಗಳನ್ನು ಕುರಿತು.

220. ಆಖ್ಯಾಪದವೂ, ಕ್ರಿಯಾಪದವೂ, ಪುರುಷ ಲಿಂಗ ವಚನಗಳಲ್ಲಿ ಸಮಾನವಾಗಿರ ಬೇಕು. ಉದಾ. ನಾನು ಇಲ್ಲಿ ಇರುತ್ತೇನೆ. ಅವನು ಬಂದನು. ಅವಳು ಹೋದಳು. ಪಕ್ಷಿ ಹಾರುತ್ತದೆ. ಸತ್ಯವಂತರು ಸತ್ಕ್ರಿಯೆಗಳನ್ನು ಮಾಡುತ್ತಾರೆ.

221. ಏಕವಚನದಲ್ಲಿ ಅನೇಕ ಆಖ್ಯಾಪದಗಳು ಒಂದೇ ಧಾತು ವಿಗೆ ಸಮ್ಬಂಧವಾಗಿ ಬರುವಾಗ, ಆ ಧಾತು ಬಹುವಚನದಲ್ಲಿರ ಬೇಕು. ಉದಾ. ಅರಸನೂ ಅರಸಿಯೂ ಬಂದರು.

222. ಇಂಥಾ ವಾಕ್ಯದ ಮೇಲೆ ಸರ್ವನಾಮ ಬಂದರೆ, ಆ ಸರ್ವನಾ ಮವು ಬಹುವಚನವಾಗಿರ ಬೇಕು. ಉದಾ. ಆ ಮನುಷ್ಯನೂ ಅವನ ಹೆಂಡತಿಯೂ ಬರುತ್ತಾರೆ; ಅವರು ಬಂದಾಗ, ಹೇಳುತ್ತೇನೆ.

223. ಅನೇಕ ಸರ್ವನಾಮಗಳು ಕೂಡಿ ಬರುವಾಗ, ನಾನು ಶಬ್ದ ಅವುಗಳಲ್ಲಿ ಶೇರಿದರೆ, ಧಾತೂ, ಹಿಂದೆ ಬರುವ ಸರ್ವನಾಮವೂ ಉತ್ತಮ ಪುರುಷವಾಗಿರ ಬೇಕು. ಉದಾ. ಅವನೂ, ನೀನೂ, ನಾನೂ ಬೆಂಗ ಳೂರಿಗೆ ಹೋದೆವು; ನಾವಲ್ಲಿರುವಾಗ, ಸುಖದಲ್ಲಿದ್ದೆವು.

224. ಆದರೆ ಅವುಗಳಲ್ಲಿ ನಾನು ಶಬ್ದವಿಲ್ಲದೆ, ನೀನು ಶಬ್ದ ಶೇರಿ ದರೆ, ಧಾತೂ, ಹಿಂದೆ ಬರುವ ಸರ್ವನಾಮವೂ ಮಧ್ಯಮ ಪುರುಷವಾ ಗಿರ ಬೇಕು. ಉದಾ. ನೀನೂ ಅವನೂ ಬುದ್ಧಿವಂತರಾಗಿದ್ದೀರಿ; ಆ ದದರಿಂದ ನಿಮಗೆ ಪ್ರಯೋಜನ ಬರುವದು.

225. ಭವಿಷ್ಯತ್ತರ್ಥವಾಗಿ ವರ್ತಮಾನರೂಪ ಬರುತ್ತದೆ. ಉದಾ. ನಾಳೆ ಬರುತ್ತೇನೆ.

226. ಅದೇ ಅರ್ಥದಲ್ಲಿ ಅತಿ ತ್ವರೆ ತೋರುವಾಗ, ಭೂತರೂಪ ಬರುತ್ತದೆ. ಉದಾ. ಈಗ ಬಂದೆ; ನಡೆ.

227. ಹೋದ ಕಾಲದಲ್ಲಿ ಒಂದು ಕೆಲಸ ನಡೆಯದ್ದಕ್ಕೆ ಕಾರಣ

ವನ್ನು ಹೇಳುವಾಗ ಭವಿಷ್ಯದ್ರೂಪ ಬರುತ್ತದೆ. ಉದಾ. ನಾನು ನಿನ್ನೆ ಬರುವೆ. ಆದರೆ ಮಳೆ ಬಂದದರಿಂದ ಬರಲಿಲ್ಲ.

228. ಮೂರು ಕಾಲಗಳ ಅರ್ಥವಾಗಿ ಭವಿಷ್ಯದ್ರೂಪ ಬರುತ್ತದೆ. ಉದಾ. ಪೂರ್ವದಲ್ಲಿ ಮಧುರಾಪುರಿ ಎಂಬ ಪಟ್ಟಣದಲ್ಲಿ ತ್ರಿವಿಕ್ರಮನೆಂಬ ಅರಸನಿರುವನು. ಈಗ ಮನೆಯಲ್ಲಿ ತಂದೆ ತಾಯಿಗಳಿರುವರು. ನೀವು ಅವನ ಮನೆಗೆ ಹೋದರೆ, ನಾಳೆ ಹಣವನ್ನು ಕೊಡುವನು.

229. ಆದರೆ ವರ್ತಮಾನ ಭವಿಷ್ಯತ್ಕಾಲಗಳ ಅರ್ಥಕ್ಕೆ ಹೆಚ್ಚಾಗಿ ಬರುವದು.

230. ನಿಷೇಧರೂಪ ಹಾಗೆಯೇ ಮೂರು ಕಾಲಗಳ ಅರ್ಥವಾಗಿ ಬರಬಹುದು. ಆದರೆ ಹೆಚ್ಚಾಗಿ ವರ್ತಮಾನ ಭವಿಷ್ಯತ್ಕಾಲಗಳ ಅರ್ಥಕ್ಕೆ ಬರುವದು. ಉದಾ. ಹೋದ ವರುಷದಲ್ಲಿ ವ್ಯಾಕರಣವನ್ನು ನಾನರಿಯೆ. ಈಗ ನೀತಿಯನ್ನು ಬಿಡೆನು; ಎಂದಿಗೂ ಬಿಡೆನು.

OF PARTICIPLES AND GERUNDS.

ನ್ಯೂನಗಳನ್ನು ಕುರಿತು.

231. ಅನುಸರಣೆ ನ್ಯೂನಗಳು ಬೇರೆ ಧಾತುವಿನ ಸಂಗಡ ಒಂದೇ ಕರ್ತೃ ಪದಕ್ಕೆ ಸಮ್ಬಂಧವಾಗಿರ ಬೇಕು. ಉದಾ. ಅವನು ಹಾಡುತ್ತಾ ಹೋದನು ಅವಳು ಹೋಗಿ ಬಂದಳು.

SYNTAX—*of Verbal Nouns.*

232. ಆದರೆ ಕಾಲವನ್ನು ಹೇಳುವಾಗ, ಬೇರೆ ಬೇರೆ ಕರ್ತೃ ಪದಗಳು ಬರುತ್ತವೆ. ಉದಾ. ನಾನು ನಿಮ್ಮನ್ನು ನೋಡಿ ಹತ್ತು ವರುಷವಾಯಿತು.

233. ಹೇತುವೆ ತೋರುವಾಗ, ಹಾಗೆಯೇ ಬರುತ್ತದೆ. ಉದಾ. ಘಾಳಿ ಬೀಸಿ ಮರದಿಂದ ಹಣ್ಣು ಬಿತ್ತು.

234. ವಿಶೇಷಣಾನ್ಯಾನಗಳ ಮೇಲೆ ಬರುವ ಶಬ್ದಗಳು ಬೇಕಾದ ವಿಭಕ್ತಿಯಲ್ಲಿ ಬರುತ್ತವೆ. ಉದಾ. ನಾನು ಕೊಟ್ಟ ಪುಸ್ತಕವು ಇದೇ. ನಾನು ಕೊಟ್ಟ ಪುಸ್ತಕವನ್ನು ಅವನು ಓದಿದನು. ನಾನು ಕೊಟ್ಟ ಪುಸ್ತಕದಿಂದ ಅವನಿಗೆ ಬುದ್ಧಿ ಬಂತು.

VERBAL NOUNS.

ಕ್ರಿಯಾವಾಚಕಗಳನ್ನು ಕುರಿತು.

235. ಅದು ಪ್ರತ್ಯಯವಾದ ಕ್ರಿಯಾನಾಮಗಳ ಸಂಗಡ ಕರ್ತೃ ಕರ್ಮಗಳನ್ನು ತೋರಿಸುವ ಶಬ್ದಗಳು ಶೇರ ಬಹುದು. ಉದಾ. ನಾನು ಹೋಗುವದು, ನೀನು ಬರೆಯುವದು, ಅವನು ಪುಸ್ತಕವನ್ನು ಓದುವದು.

236. ಓಣ ಪ್ರತ್ಯಯವಾದವುಗಳ ಸಂಗಡ ಕರ್ತೃಪದ ಶೇರ ಬಹುದು. ಉದಾ. ನೀವು ಬರೋಣ ಯಾವಾಗ ಆಯಿತು.

237. ಆದರೆ ಇಕೆ, ಉವಿಕೆ, ಮೊದಲಾದ ಪ್ರತ್ಯಯವುಳ್ಳವುಗಳ ಸಂಗಡ ಬೇರೆ ಶಬ್ದಗಳು ಶೇರಿದರೆ, ಷಷ್ಟಿಯಲ್ಲಿ ಮಾತ್ರ ಬರುವದು. ಉದಾ. ಅವರ ತಿಳುವಿಕೆ. ತಂದೆಯ ಬರುವಿಕೆ.

INDECLINABLE WORDS.

ಅವ್ಯಯಗಳು.

238. ಷಷ್ಠಿಯ ಮೇಲೆ ಬರುವ ಅವ್ಯಯಗಳಲ್ಲಿ ಮುಖ್ಯವಾದವುಗಳು ಯಾವವಂದರೆ, ಸಂಗಡ, ಸಂಗಾತ, ಒಡನೆ, ಕೂಡ, ಬಗ್ಯೆ, ನಿಮಿತ್ತ, ತನಕ, ವರಿಗೆ, ಮಟ್ಟಿಗೆ, ಪರ್ಯಂತರ, ಸುತ್ತ, ಸುತ್ತಲು. ತರುವಾಯ, ಬಳಿಯ, ಮೇಲೆ, ಕೆಳಗೆ, ಹಾಗೆ, ಅಂತೆ, ಮೊದಲಾದವುಗಳು. ಉದಾ. ಅವನ ಸಂಗಡ ಹೋದನು. ಈ ಕೆಲಸದ ನಿಮಿತ್ತ ಬಂದಿದ್ದಾನೆ.

239. ಚತುರ್ಥಿಗೆ ಬರುವ ಅವ್ಯಯಗಳು ಯಾವವಂದರೆ; ಓಸ್ಕರ, ಇಂತ, ಅಂತ, ಮುಂಚೆ, ಎಂಬವುಗಳು. ಉದಾ. ಇದಕ್ಕೋಸ್ಕರ ಬಂದೆನು. ಅವನಿಗಿಂತ ನೀನು ಬುದ್ಧಿವಂತನು. ಮುಂಚೆ ಬರಬೇಕಾಗಿತ್ತು.

240. ಹೊರ್ತು ಎಲ್ಲಾ ವಿಭಕ್ತಿಗಳಿಗೆ ಬರುತ್ತದೆ. ಉದಾ. ನೀನೇ ಹೊರ್ತು ಬೇರೆ ಆಧಾರವಿಲ್ಲ. ಅವನ ಹೊರ್ತು ನೀವೆಲ್ಲರು ಬನ್ನಿ.

241. ಇನ್ನೂ ಕೆಲವು ಅವ್ಯಯಗಳು ವಿಶೇಷಣಾನ್ಯೂನಗಳಿಗೆ ಸೇರುತ್ತವೆ. ತನಕ, ವರಿಗೆ, ಪರ್ಯಂತರ, ಮಟ್ಟಿಗೆ, ಮುಂಚೆ, ಬಳಿಕ, ತರುವಾಯ, ಮೇಲೆ, ಹಾಗೆ, ಮೊದಲಾದವುಗಳು. ಉದಾ. ಓದುವ ತನಕ. ಬಂದ ತರುವಾಯ. ಬರುವ ಮಟ್ಟಿಗೆ.

242. ಕೆಲವು ಅವ್ಯಯಗಳು ಕ್ರಿಯಾವಿಶೇಷಣಗಳಾಗಿ ಪ್ರಯೋಗವಾಗುತ್ತವೆ. ಉದಾ. ಹಾಗೆ ಮಾಡು. ಹೀಗೆ ಬರೆ. ಮುಂಚೆ ಹೋಗು.

SYNTAX—*of Indeclinable Words.*

243. ಕೆಲವು ಶಬ್ದಗಳನ್ನು ಕೂಡಿಸುವದರಲ್ಲಿ, ಆಗಲಿ—ಆಗಲಿ; ಆದರೂ—ಆದರೂ, ಎಂಬ ಕ್ರಿಯಾಪದಗಳನ್ನು ಅವ್ಯಯಗಳಾಗಿ ಬಳಿಸುವದುಂಟು. ಉದಾ. ತಂದೆಗಾಗಲಿ, ಮಗನಿಗಾಗಲಿ, ಅದನ್ನು ಹೇಳು. ದೊಡ್ಡವನಾದರೂ, ಚಿಕ್ಕವನಾದರೂ, ದೇವರಿಗೆ ಭಯಪಡ ಬೇಕು.

244. ಕೆಲವು ವಾಕ್ಯಗಳನ್ನು ಕೂಡಿಸುವದಕ್ಕೆ, ಇದಲ್ಲದೆ, ಅದಲ್ಲದೆ, ಆದರೆ, ಎಂಬ ಅವ್ಯಯಗಳನ್ನು ಶೇರಿಸುವದುಂಟು. ಉದಾ. ಮನುಷ್ಯನು ದೇವರಿಗೆ ಭಯಪಡ ಬೇಕು; ಅದಲ್ಲದೆ ಆತನನ್ನು ಪ್ರೀತಿ ಮಾಡ ಬೇಕು. ದೇವರು ಮನುಷ್ಯನಿಗೆ ಪ್ರಾಣವನ್ನು ಕೊಟ್ಟಿದ್ದಾನೆ; ಇದಲ್ಲದೆ ಅವನನ್ನು ನಿತ್ಯವೂ ಕಾಪಾಡುತ್ತಾನೆ; ಆದರೆ ಮನುಷ್ಯನು ಅದನ್ನು ಎಣಿಸುವದಿಲ್ಲ.

GRAMMATICAL TERMS.

ವ್ಯಾಕರಣದಲ್ಲಿ ಪ್ರಯೋಗಿಸುವ ಮುಖ್ಯ ಶಬ್ದಗಳು.

LETTER OR SYLLABLE.	ವರ್ಣ = ಅಕ್ಷರ
Vowel.	ಸ್ವರ
Short.	ಹ್ರಸ್ವ
Long.	ದೀರ್ಘ
Consonant.	ವ್ಯಂಜನ
Junction of Letters	ಸಂಧಿ
Elision ———	ಲೋಪ
Augment ———	ಆಗಮ
Change ———	ಆದೇಶ
WORD (*Part of Speech*) ...	ಶಬ್ದ
Pure Canarese	ದೇಶ್ಯ
Pure Sanscrit. ...	ತತ್ಸಮ
Corrupted Sanscrit ...	ತದ್ಭವ
Foreign Words. ...	ಅನ್ಯದೇಶ್ಯ
Ungrammatical Forms ...	ಗ್ರಾಮ್ಯ

GRAMMATICAL TERMS.

Uninflected Word (Crude State)	ಪ್ರಕೃತಿ
Inflected Word	ಪದ
Affix	ಪ್ರತ್ಯಯ
Sentence	ವಾಕ್ಯ
Subject	ಆಖ್ಯೆ
Predicate	ಆಖ್ಯಾತ
Complement of Subject or Predicate	ಸಮಾಪಕ
NOUN	ನಾಮಪದ
Gender	ಲಿಂಗ
Masculine	ಪುಲ್ಲಿಂಗ
Feminine	ಸ್ತ್ರೀಲಿಂಗ
Neuter	ನಪುಂಸಕಲಿಂಗ
Number	ವಚನ
Singular	ಏಕವಚನ
Plural	ಬಹುವಚನ
Case	ವಿಭಕ್ತಿ
Nominative	ಪ್ರಥಮೆ
Accusative	ದ್ವಿತೀಯೆ
Instrumental	ತೃತೀಯೆ
Dative	ಚತುರ್ಥಿ

GRAMMATICAL TERMS.

Ablative	ಪಂಚಮಿ
Genitive	ಷಷ್ಠಿ
Locative	ಸಪ್ತಮಿ
Vocative	ಸಂಬೋಧನೆ
Declension	ರೂಪ
Noun of Relationship	ಬಂಧುವಾಚಕ
ADJECTIVE	ಗುಣವಾಚಕ
Numeral	ಸಂಖ್ಯಾವಾಚಕ
PRONOUN	ಸರ್ವನಾಮ
VERB	ಕ್ರಿಯಾಪದ
Root (Verbal)	ಧಾತು
Agent, (Nom. to the Verb) ...	ಕರ್ತೃ
Object, (Obj. after the Verb) ...	ಕರ್ಮ
Person	ಪುರುಷ
First	ಉತ್ತಮ
Second	ಮಧ್ಯಮ
Third	ಪ್ರಥಮ
Inflected Forms of the Verb. ...	ಆಖ್ಯಾತರೂಪಗಳು
Mood	ರೂಪ
Indicative	ನಿಶ್ಚಯರೂಪ

GRAMMATICAL TERMS.

	Subjunctive	ಸಂಶಯರೂಪ
	Imperative	ವಿಧಿ
	Negative	ನಿಷೇಧ
TENSE		ಕಾಲ
	Present	ವರ್ತಮಾನ
	Past	ಭೂತ
	Future	ಭವಿಷ್ಯತ್ತು
Uninflected Forms of the Verb...		ಅವ್ಯಯರೂಪಗಳು
	Infinitive Mood ...	ಭಾವರೂಪ
	Gerund	ಅನುಸರಣೊನ್ಯೂನ ಕ್ರಿಯಾನ್ಯೂನ.
	Participle	ವಿಶೇಷಣಾನ್ಯೂನ ಕೃದ್ವಾಚಿ.
Transitive (or Active) Verb ...		ಸಕರ್ಮಕ ಕ್ರಿಯಾಪದ
Intransitive Verb		ಅಕರ್ಮಕ ಕ್ರಿಯಾಪದ
Regular Verb.		ಕ್ರಮವಾದ ಕ್ರಿಯಾಪದ
Irregular ——		ವಿಕಾರವಾದ ಕ್ರಿಯಾಪದ
Defective ——		ಅಪೂರ್ಣ ಕ್ರಿಯಾಪದ

GRAMMATICAL TERMS.

Reflexive ——	ಸ್ವಾರ್ಥ ಕ್ರಿಯಾಪದ
Passive ——	ಕರ್ಮಣಿ ಕ್ರಿಯಾಪದ
Causal ——	ಪ್ರೇರಣಾ ಕ್ರಿಯಾಪದ
INDECLINABLE WORDS. ...	ಅವ್ಯಯಗಳು
Postposition	ವಿಭಕ್ತ್ಯವ್ಯಯ
Adverb	
Joined to Adjective	ಗುಣವಿಶೇಷಣ
—— Verbs ...	ಕ್ರಿಯಾವಿಶೇಷಣ
Conjunction	ಸಮುಚ್ಚಯಾವ್ಯಯ
Interjection	
Caling another ...	ಸಂಬುದ್ಧ್ಯವ್ಯಯ
Exclamation of wonder, &c	ಭಾವಬೋಧಕಾವ್ಯಯ
Derivative Noun	ತದ್ಧಿತಪದ.
Verbal Noun	{ ಕ್ರಿಯಾವಾಚಕ ಕ್ರಿಯಾನಾಮ.
Compound Noun	ಸಮಾಸಪದ
SYNTAX.	ಪ್ರಯೋಗ
Parsing	ಪದವಿಭಾಗ ಮಾಡುವದು

GRAMMATICAL TERMS.

PROSODY	ಛಂದೋವಿದ್ಯ.
Metre	ಛಂದಸ್ಸು
Verse	ಶ್ಲೋಕ
Line of a Verse ...	ಪಾದ
Rhyme	ಪ್ರಾಸ

ಸಂಪೂರ್ಣ.



ELEMENTS

OF

CANARESE GRAMMAR.

By Rev. C. CAMPBELL, B. A.

ಕನ್ನಡ ವ್ಯಾಕರಣ ಸಾರವು.

ಕೇಂಬಲ್ ಅಯ್ಯನವರು ಬರೆದದ್ದು.

Fifth Edition,
3000 *Copies.*

BANGALORE:
PRINTED AND PUBLISHED FOR THE TRACT AND
SCHOOL BOOK SOCIETY,
BY W. W. GAUNT, AT THE WESLEYAN MISSION PRSSE,
1870.